Sri S. SHARAN GOWDA (Jewargi).—Sir, I big to move :-

"That this Assembly agrees with the tenth Report of the Business Advisory Committee."

Mr. DEPUTY SPEAKER.—The question is:

"That this Assembly agrees with the tenth Report of the Business Advisory Committee."

The motion was adopted.

Member's Representation

Sri V. SRINIVAS SHETTY (Coondapur).—Sir, I wish to request Government for a clarification. We know that the Land Reforms Bill was introduced about 8 months back. We were expecting that this House would discuss the Bill and take a final decision in the matter. We were thinking that in the current Budget session this Bill would come up for discussion and that a few days would be allotted for it, but now we are practically coming to the end of the current session and there is no time left for discussion of this Bill. This is a very important Bill. I do not wish to make any allegation at this stage, but we are very anxious that this Bill should be discussed at a very early date. So we request the Chief Minister to clarify the issue and tell us when this Bill will come before this House for discussion.

Sri B. D. JATTI (Chief Minister).—Government is very anxious to take up the Land Reforms Bill as suggested by theLeader of the Opposition. Government is anxious to call a special session for discussion only of the Land Reforms Bill as it was done in Kerala. It will be called in the middle of July. It may be for a week or 8 or 10 days to discuss it and send it to a Select Committee. We have also no objection if the House is in a mood to discuss it finally and also pass it.

MYSORE VILLAGE PANCHAYATS AND LOCAL BOARDS BILL, 1959.

(As reported by the Joint Select Committee.

Motion to consider (contd.)

Sri T. SUBRAMANYA (Minister for Law, Labour and Local Self-Government).—Sir, at the consideration stage several members have made several comments on the different aspects of the Bill. They have also touched upon the several clauses and discussed the several clauses in detail. At this stage I do not intend to take the House through the several clauses referred to by Hon'ble Members because several amendments have been placed before this House.

ಒಬ್ಬ ಮಾನ್ಯ ಸದಸ್ಯರು.—ಉತ್ತರವನ್ನು ಮಾನ್ಯ ಮಂತ್ರಿಗಳು ಕನ್ನಡದಲ್ಲಿ ಹೇಳಿದ್ದರೆ ನಮಗೆಲ್ಲ ಅನುಕೂಲವಾಗುತ್ತಿತ್ತು. ಆದ್ದರಿಂದ ಕನ್ನಡದಲ್ಲಿ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಸುಬ್ರಹ್ಮಣ್ಯ.—ಆಗಲಿ. ನನಗೆ ಕನ ಡದಲ್ಲಿ ಮಾತನಾಡುವುದಕ್ಕೇನೂ ಅಂಥ ಕಷ್ಟವಿಲ್ಲ. ಎಷ್ಟು ಸೂಕ್ಷ್ಮ ಭಾವನೆಯನ್ನ ಸೂಚಿಸುವುದಕ್ಕೂ ನನ್ನಲ್ಲಿ ಅಪ್ಪೂ ಶಬ್ದ ಭಂಡಾರ ಉಂಟು.

ಶ್ರೀ ಜೆ. ಬಿ. ಮುಲ್ಲಾರಾಧ್ಯ (ನಂಜನಗೂಡು).—ತಮಗೇನು ಸ್ವಾಮಿ, ತಮ್ಮಲ್ಲಿ ಶಬ್ದ ಸಂಪತ್ತು ಹೆಚ್ಚಾಗಿಯೇ ಇದೆ.

Sri C. M. ARUMUGHAM (Kolar Gold Fields).—I rise to a point of order. The Hon'ble Minister commenced his speech in English. Can he now be allowed to change the language of his speech? According to the Rules of Procedure he cannot now be allowed to switch on to Kannada.

Sri M. RAMAPPA Harihar).—If the rule can be similarly relaxed in the case of other members also, we have no objection.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಭಾಷಣ ಮಾಡುವುದಕ್ಕೆ ಪ್ರಾರಂಭ ಮಾಡಿದ ತಕ್ಷಣವೇ ಒಬ್ಬ ಮಾನ್ಯ ಸದಸ್ಯರು ಈ ವಿಚಾರವನ್ನೆತ್ತಿದರು. ಆದುದರಿಂದ ಅವರೀಗ ಕನ್ನಡದಲ್ಲಿ ಮಾತನಾಡಿದರೆ ಅದೇನೂ ಅಂಥ ಒಂದು ತಪ್ಪಾಗುವುದಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯ.—ಈ ಜಾಯಿಂಟ್ ಸೆಲೆಕ್ಟ್ ಸಮಿತಿಯ ರಿಪೋರ್ಟಿನ ಮೇಲೆ ಅನೇಕ ಮಾನ್ಯ ಸದಸ್ಯರುಗಳು ಅನೇಕ ವಿಷಯಗಳನ್ನು ಚರ್ಚೆಮಾಡಿದ್ದಾರೆ. ಆದರೆ ನಾನೀಗ ಪ್ರತಿಯೊಂದು ವಿಚಾರವನ್ನೂ ಕ್ಲಾಜ್ ಬೈ ಕ್ಲಾಜ್ ನಮೂದಲಸಲಕ್ಕೆ

(ಶ್ರೀ ಟಿ. ಸುಬ್ರಹ್ಮಣ್ಯ)

ಹೋಗದೆ ಈಗಾಗಲೆ ಅನೇಕ ತಿದ್ದುಪಡಿಗಳು ಬಂದಿರುವುದರಿಂದ ಏವುಗಳನ್ನು ಚರ್ಚೆ ಮಾಡತಕ್ಕ ಕಾಲದಲ್ಲಿ ಆಗ ಯಾವುದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯ ಯಾವುದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬುದನ್ನೆಲ್ಲ ತಿಳಿಸುತ್ತೇನೆ.

ಸರ್ಕಾರದವರಿಗೆ ಈ ಪದಗಳನ್ನು ಉಪಯೋಗಿಸತಕ್ಕ ಸಂಬಂಧದಲ್ಲಿ ಇಂಥ ಶಬ್ದವನ್ನೇ ಇಲ್ಲಿ ಉಪಯೋಗಿಸಬೇಕು, ಇಂಥ ಶಬ್ದವನ್ನೇ ಅಲ್ಲಿ ಉಪಯೋಗಿಸಬೇಕು ಎನ್ನತಕ್ಕ ಹಟವೇನೂ ಇಲ್ಲ. ಒಟ್ಟಿನಲ್ಲಿ ಈ ಮಸೂದೆಯು ಎಲ್ಲರಿಗೂ ಅರ್ಥವಾಗುವ ಹಾಗೆ ಮತ್ತು ನಮ್ಮ ಕೆಲಸಕಾರ್ಯಗಳು ಸುಗಮವಾಗಿ ನಡೆಯುವಹಾಗೆ ಮಾಡತಕ್ಕ ಶಬ್ದಗಳು ಯಾವುವು ಇವೆಯೋ ಅಂಥವುಗಳನ್ನು ಒಪ್ಪಿಕೊಳ್ಳುವುದಕ್ಕೆ ನಾವು ಯಾವಾಗ್ಲೂ ಸಿದ್ಧವಾಗಿದ್ದೇವೆ. ಆದರೆ ಇಲ್ಲಿಯತನಕ ಮಾನ್ಯ ಸದಸ್ಯರುಗಳು ಬಹಳವಾಗಿ ನಡೆಸಿರತಕ್ಕ ಚರ್ಚೆಯಲ್ಲಿ ಕೇವಲ ಮೂರು ನಾಲ್ಕು ವಿಷಯಗಳು ಮಾತ್ರ ಪ್ರತಿಯೊಬ್ಬರ ಭಾಷಣದಲ್ಲೂ ಎದ್ದು ಕಾಣುತ್ತಿವೆ.

ನಾನೀಗ ಮೊಟ್ಟಮೊದಲನೆಯದಾಗಿ ಡಿಸ್ಟ್ರಿಕ್ಟ್ ಕೌನ್ಸಿಲ್ ವಿಚಾರವನ್ನು ತೆಗೆದುಕೊಳ್ಳುತ್ತೇನೆ. ಈಗ ಈ ಡಿಸ್ಟ್ರಿಕ್ಟ್ ಕೌನ್ಸಿಲ್‌ಗಳ ಅಧ್ಯಕ್ಷತೆಯನ್ನು ಡೆಪ್ಯುಟಿ ಕಮಿಷನರಿಗೆ ಕೊಟ್ಟಿರುವುದರಿಂದ ಈ ಸಭೆಯಲ್ಲಿ ಅನೇಕ ಮಾನ್ಯ ಸದಸ್ಯರು ಒಬ್ಬ ಸರ್ಕಾರಿ ಅಧಿಕಾರಿಗೆ ಈ ಸಂಸ್ಥೆಯ ಅಧ್ಯಕ್ಷ ಪದವಿಯನ್ನು ಕೊಟ್ಟಿರುವುದರಿಂದ ಇಂಥ ಸಂಸ್ಥೆಗಳಲ್ಲಿ ಈ ಸಭೆಯ ಸದಸ್ಯರುಗಳೂ ಮತ್ತು ಪಾರ್ಲಿಮೆಂಟಿನ ಸದಸ್ಯರೂ ಪ್ರತಿನಿಧಿಗಳಾಗಿ ಭಾಗವಹಿಸುವಹಾಗೆ ಮಾಡಬೇಕೆಂದು ಹೇಳಿರುವುದು ಈ ಖಾಸಗೀ ಸದಸ್ಯರುಗಳ ಘನತೆ ಗೌರವಗಳಿಗೆ ಚ್ಯುತಿ ಬರುವ ಹಾಗಿದೆ ಎಂದು ವಾದ ಮಾಡಿ ಇದನ್ನು ಬದಲಾಯಿಸಬೇಕೆಂದು ಹೇಳಿದ್ದಾರೆ. ಈಗಿರತಕ್ಕ ಪ್ರಜಾಯುಗಧರ್ಮಕ್ಕೆ ಒಬ್ಬ ಅಧಿಕಾರಿಯನ್ನು ಇಂಥ ಸಂಸ್ಥೆಗಳಿಗೆ ಅಧ್ಯಕ್ಷರನ್ನಾಗಿ ಮಾಡತಕ್ಕದ್ದು ಪ್ರಜಾಧರ್ಮಕ್ಕೇ ಒಂದು ಕುಂದನ್ನುಂಟು ಮಾಡತಕ್ಕದ್ದಾಗಿದೆ, ಆದುದರಿಂದ ಈ ಅಧಿಕಾರವನ್ನು ಯಾರಾದರೊಬ್ಬ ಖಾಸಗೀ ಪ್ರಮುಖವ್ಯಕ್ತಿಗೆ ಕೊಡಬೇಕೆಂದುದಾಗಿ ಅನೇಕ ಸದಸ್ಯರು ಹೇಳಿದ್ದಾರೆ. ಆದರೆ ಇಲ್ಲಿರತಕ್ಕ ಇಪ್ಪತ್ತೊಂದು ಜನ ಸದಸ್ಯರ ಸಭೆಯಲ್ಲಿ ಇದು ಕೂಡದು ಎಂಬ ಒಂದು ಪ್ರತಿಧ್ವನಿ ಯಾರಿಂದಲೂ ಬಂದಹಾಗೆ ಕಾಣಲಿಲ್ಲ. ಆದರೆ ಈ ವಿಚಾರ ಜಾಯಂಟ್ ಸೆಲೆಕ್ಟ್ ಸಮಿತಿಯವರ ಮುಂದೆ ಚರ್ಚೆಗೆ ಬಂದಾಗ ಅಲ್ಲಿ ಎಲ್ಲಾ ವಿಚಾರಗಳನ್ನೂ ಚರ್ಚೆಮಾಡಿ ಕಡೆಗೆ ಈ ಜಿಲ್ಲಾ ಸಮಿತಿಗಳಿಗೆ ಡೆಪ್ಯುಟಿ ಕಮಿಷನರ್ ಇರತಕ್ಕದ್ದೇ ಸೂಕ್ತ ಎನ್ನುವುದಾಗಿ ಕಂಡುಬಂದುದರಿಂದ ಹೀಗೆ ಡೆಪ್ಯುಟಿ ಕಮಿಷನರುಗಳನ್ನು ಈ ಸಂಸ್ಥೆಗಳಿಗೆ ಅಧ್ಯಕ್ಷರಾಗಿರಲೆಂದು ಇಟ್ಟುಕೊಳ್ಳಲಾಯಿತು. ಆದರೆ ಈಗ ಇದನ್ನು ಬದಲಾಯಿಸಬೇಕೆಂದು ಹೇಳುತ್ತಿದ್ದಾರೆ. ಅದರೆ ಹಾಗೆ ಬದಲಾವಣೆ ಮಾಡುವುದಕ್ಕೂ ನಾನೇನೋ ತಯಾರಾಗಿಯೇ ಇದ್ದೇನೆ. ಆದರೆ ಇದರಲ್ಲಿ ನಾವು ಆಲೋಚನೆ ಮಾಡಬೇಕಾದ ವಿಚಾರ ಇನ್ನೂ ಒಂದಿದೆ. ಇಡೀ ಹಿಂದೂಸ್ಥಾನದಲ್ಲಿ ಆಸೇತು ಹಿಮಾಚಲಪರ್ಯಂತ ಎಲ್ಲೆಲ್ಲಿ ಈ ಲೋಕಲ್ ಬೋರ್ಡ್, ಆಕ್ಟ್, ಜಾರಿಯಲ್ಲಿರುತ್ತದೆಯೋ ಆ ಎಲ್ಲ ಪ್ರಾಂತ್ಯಗಳಲ್ಲೂ ಈ ಸಂಸ್ಥೆಗಳಿಗೆ ಡೆಪ್ಯುಟಿ ಕಮಿಷನರುಗಳನ್ನೇ ಅಧ್ಯಕ್ಷರನ್ನಾಗಿ ಮಾಡಿರುತ್ತಾರೆ. ಆ ಒಂದು ಅಂಶವನ್ನೂ ಕೂಡ ತಾವೀಗ ಗಮನದಲ್ಲಿಟ್ಟುಕೊಳ್ಳಬೇಕು. ಹೀಗೆ ಈ ಒಂದು ಅಂಶವನ್ನು ಗಮನದಲ್ಲಿಟ್ಟುಕೊಂಡು ಈಗ ತಾವು ಹೇಳುವ ರೀತಿಯಲ್ಲಿ ಇದನ್ನು ನಾವು ಬದಲಾವಣೆ ಮಾಡಿದರೆ, ಯಾರೂ ಮಾಡದ ಇರತಕ್ಕಂಥಾ ಒಂದು ವಿಪರೀತ ಬದಲಾವಣೆಯನ್ನು ನಾವು ಮಾಡಿದ ಹಾಗೆ ಆಗುವುದಿಲ್ಲವೇ ?

ಶ್ರೀ ಜೆ. ಬಿ. ಮಲ್ಲಾರಾಧ್ಯ (ನಂಜನಗೂಡು).—ತಾವು ಆ "ವಿಪರೀತ" ಎಂಬ ಶಬ್ದವನ್ನೇಕೆ ಹೇಳೋಣವಾಯಿತು.

ಶ್ರೀ ಟಿ. ಸುಬ್ರಹ್ಮಣ್ಯ.—'ವಿಪರೀತ' ಎನ್ನುವ ಶಬ್ದ "ವೈಪರೀತ್ಯ" ಎಂಬ ಸಂಸ್ಕೃತ ಶಬ್ದದಿಂದ ಹುಟ್ಟಿದೆ 'ವಿಶೇಷ ಬದಲಾವಣೆ' ಎಂದು ಆ ಶಬ್ದದ ಅರ್ಥ. ಶ್ರೀ ಮಲ್ಲಾರಾಧ್ಯರಿಗೆ ಈ ಶಬ್ದದ ಅರ್ಥ ಸ್ಪಷ್ಟವಾಗಿ ಗೊತ್ತಿದ್ದರೂ ನನ್ನಿಂದ ಕೇಳಬೇಕೆಂಬ ಆಸೆ ಅವರಿಗಿದೆ. ಎಲ್ಲವನ್ನೂ ಸ್ಪಷ್ಟವಾಗಿ ತಿಳಿದುಕೊಂಡು ಅಂಗೀಕಾರ ಮಾಡುವುದು ಒಳ್ಳೆಯದೆಂದು ಹೇಳಿದ್ದೇನೆ. ಅದನ್ನು ಅಂಗೀಕರಿಸುವುದು ಬಿಡುವುದು ಮಾನ್ಯ ಸದಸ್ಯರಿಗೆ ಬಿಟ್ಟಿದ್ದು. ಏಕೆಂದರೆ ಈ ಸಭೆಯಲ್ಲಿ ಬಹುಶಃ ಮಾತನಾಡಿರುವವರೆಲ್ಲರೂ—ಬಹಳ ಸ್ವಲ್ಪ ಜನ ಮಾತನಾಡಿದ್ದಾರೆ—ಮತ್ತು ಸೆಲೆಕ್ಟ್ ಕಮಿಟಿಯಲ್ಲಿ ಬಹುಭಾಗದ ಸದಸ್ಯರು ಡೆಪ್ಯೂಟಿ ಕಮಿಷನರನ್ನು ಬದಲಾಯಿಸಿ ಅವರ ಸ್ಥಾನದಲ್ಲಿ ಖಾಸಗಿ ಮನುಷ್ಯರನ್ನು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲಿನ ಅಧ್ಯಕ್ಷರಾಗಿ ಹಾಕಬೇಕೆಂದೂ, ಚುನಾವಣೆ ಇಲ್ಲದೆ ಹೊಂದರೆ ನಾಮಿನೇಷನ್ ಮಾಡಬೇಕೆಂದೂ ಹೇಳಿದಂಥ ವಾದವನ್ನು ನಾನು ಕೇಳಿದ್ದೇನೆ. ಸರ್ಕಾರದಲ್ಲಿ ನಾಮಿನೇಟ್ ಮಾಡತಕ್ಕ ಅಧಿಕಾರವನ್ನು ಇಟ್ಟುಕೊಳ್ಳುವುದಕ್ಕೆ ನಾನು ಸಿದ್ಧನಾಗಿಲ್ಲ. ಸರ್ಕಾರ ನಾಮಿನೇಟ್ ಮಾಡಕೂಡದು ಎಂದು ನನ್ನ ಅಭಿಪ್ರಾಯ. ಖಾಸಗಿ ಅಧ್ಯಕ್ಷರಿರಲು ಅವಕಾಶವನ್ನು ಕೊಟ್ಟರೆ ಅದನ್ನು ಚುನಾವಣೆಗೆ ಬಿಡಬೇಕು. ಆದರೆ ಡೆಪ್ಯುಟಿ ಕಮಿಷನರು ಏಕೆ ಇರಬೇಕು ಎಂದರೆ. ಈಗಿನ ಲೋಕಲ್ ಬೋರ್ಡ್ಸ್ ಮತ್ತು ವಿಲೇಜ್ ಪಂಚಾಯತ್ಸ್ ಆಕ್ಟ್ಸ್ ಪ್ರಕಾರ ಅವರಿಗೆ ಇರತಕ್ಕ ಕೆಲಸವೆಲ್ಲ ದೇಶಕ್ಕೆ ಬೇಕಾಗಿರುವ ಅಭಿವೃದ್ಧಿ ಕಾರ್ಯಕ್ರಮಮಾತ್ರ. ದೇಶಕ್ಕೆ ಬೇಕಾಗಿರುವ ಅಭಿವೃದ್ಧಿ ಕಾರ್ಯಗಳೆಲ್ಲವನ್ನೂ ವಿಲೇಜ್ ಪಂಚಾಯಿತಿ ಮತ್ತು ಲೋಕಲ್ ಬೋರ್ಡ್‌ಗಳ ಮೂಲಕ ನಡೆಸಬೇಕೆನ್ನುವುದು ಸರ್ಕಾರದ ಇರಾದೆ. ಜನಗಳು ಸಾಮಾನ್ಯವಾಗಿ ತಾವೇ ಯೋಚನೆ ಮಾಡಿ, ತಾವೇ ಯೋಜನೆಯನ್ನು ತಯಾರುಮಾಡಿ ಆ ಯೋಜನೆಗೆ ಅನುಗುಣವಾಗಿ ಕಾರ್ಯಕ್ರಮ ತೆಗೆದುಕೊಂಡರೆ, ಜನ ಸಾಮಾನ್ಯರಿಗೆ ಬೇಕಾದ ಕೆಲಸಗಳು ಸುಲಭವಾಗಿ ನಡೆಯುತ್ತವೆ. ಎನ್ನುವುದನ್ನು ಮಾನ್ಯ ಸದಸ್ಯರೆಲ್ಲ ಒಪ್ಪುತ್ತಾರೆ. ಇದುವರೆಗೂ ಹತ್ತು-ಹನ್ನೆರಡು ವರ್ಷಗಳಿಂದ ಅಭಿವೃದ್ಧಿ ಕಾರ್ಯಗಳು ಹಳ್ಳಿಗಳಲ್ಲಿ ನಡೆದುಕೊಂಡು ಬಂದಿವೆ. ಆದರೆ ಎಲ್ಲ ತೇಪೆ ಕೆಲಸದಂತೆ ನಡೆದಿದೆ. ಸರ್ಕಾರದವರು ಬೇರೆ ಕುಳಿತುಕೊಂಡು ಆ ಊರಿಗೆ ಬಾವಿಬೇಕು, ಈ ಊರಿಗೆ ರಸ್ತೆಬೇಕು, ಎಂದು ತೀರ್ಮಾನ ಮಾಡುವುದಕ್ಕೆ ಬದಲಾಗಿ ಜನಗಳೇ ತಮಗೆ ಬೇಕಾಗಿರತಕ್ಕ ಕಾರ್ಯಗಳನ್ನು ಕಲ್ಪನೆಮಾಡತಕ್ಕವರು, ಯೋಜನೆಯನ್ನು ತಯಾರುಮಾಡುವವರು, ಅದರ ಕಾರ್ಯಕ್ರಮ ಕೈಗೊಳ್ಳುವವರೂ ಆದರೆ ಕೆಲಸ ಸುಲಲಿತವಾಗಿ, ಜಾಗ್ರತೆಯಾಗಿ ಬಹಳ ಚೆನ್ನಾಗಿ ನಡೆಯುತ್ತದೆನ್ನುವುದು ಮಾನ್ಯ ಸದಸ್ಯರ ಅಭಿಪ್ರಾಯವೆಂದು ನಾನು ತಿಳಿದಿದ್ದೇನೆ. ಆದಕ್ಕೋಸ್ಕರ ಬಹುಭಾಗದ ಕೆಲಸ ವಿಲೇಜ್ ಪಂಚಾಯಿತಿ

ಮತ್ತು ತಾಲ್ಲೂಕು ಬೋರ್ಡ್‌ಗಳಿಗೆ ಇದೆ. ಡಿಸ್ಟ್ರಿಕ್ಟ್ ಕೌನ್ಸಿಲುಗಳಿಗೆ ಇರುವುದು ನ್ಯೂಟಿನಿ ಕೆಲಸ. ಇದರಲ್ಲಿ ಡೆಪ್ಯುಟಿ ಕಮಿಷನರಿದ್ದರೆ ಸ್ವಲ್ಪ ಸಮನ್ವಯಕ್ಕೆ ಅನುಕೂಲವಾಗುತ್ತದೆಂದು ಹೇಳತಕ್ಕವಾದವಿದೆ. ಖಾನಗಿ ಮನುಷ್ಯರಾದರೂ ಮಾಡಬಹುದು; ಅದರಿಂದ ತೊಂದರೆಯಾಗುವುದಿಲ್ಲ. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಜಿಲ್ಲಾಧಿಕಾರಿಗಳು ಜಿಲ್ಲೆಗೆ ಪ್ರತಿನಿಧಿಯಾಗಿ, ಆ ಮನುಷ್ಯ ಸರ್ಕಾರಿ ನೌಕರನಾಗಿ ಎಲ್ಲ ತಾಲ್ಲೂಕುಗಳಲ್ಲಿಯೂ ನಡೆಯುತ್ತಿರತಕ್ಕ ಕೆಲಸವನ್ನೂ ಸಮನ್ವಯ ಮಾಡಿಕೊಂಡು ನಡೆಸುವುದು ಸುಲಭವಾಗುತ್ತದೆಂದು ಅಭಿಪ್ರಾಯ.

ಡಿಸ್ಟ್ರಿಕ್ಟ್ ಕೌನ್ಸಿಲಗೆ ಖಾನಗಿ ದೊಡ್ಡ ಮನುಷ್ಯರೊಬ್ಬರನ್ನು ಆರಿಸಿದರೆ ಅವರಿಗೆ ಏನೂ ಕೆಲಸ ಕೊಡದೆ ಇರುವುದು ಸರಿಯಾಗುವುದಿಲ್ಲ. ಡಿಸ್ಟ್ರಿಕ್ಟ್ ಕೌನ್ಸಿಲ್‌ಗಳಿಗೆ ಇವೊತ್ತಿನ ದಿವಸ ನಾವು ಕೊಡತಕ್ಕ ಕಂದಾಯದ ಭಾಗವೇ ಆಗಲಿ ಅಥವಾ ಏನು ಹಣವನ್ನು ಅಲೊಕೇಟ್‌ಮಾಡುತ್ತೇವೆಯೋ ಅದಾಗಲಿ ಗ್ರಾಂಟ್ಸ್ ಆಗಲಿ ಅವರಿಗೆ ಕೊಡಲು ಒದಗಿಸಿಲ್ಲ; ದುಡ್ಡನ್ನು ಕಾದು ಇಟ್ಟಿಲ್ಲ. ದುಡ್ಡಿಲ್ಲದೆ ಯಾವ ವಿಧವಾದ ಹಣದ ಸಹಾಯವನ್ನೂ ಒದಗಿಸದೆ ಒಬ್ಬ ಖಾನಗಿ ದೊಡ್ಡ ಮನುಷ್ಯನನ್ನು ಅಲ್ಲಿ ಕೂಡಿಸಿ ನಿನಗೆ ಕೆಲಸವಿಲ್ಲ, ಸುಮ್ಮನೆ ಅಧ್ಯಕ್ಷತೆಯನ್ನು ವಹಿಸಿಕೊಂಡು ಹೋಗು ಎಂದು ಹೇಳುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಒಬ್ಬ ದೊಡ್ಡಮನುಷ್ಯನನ್ನು ಅಲ್ಲಿ ಕೂಡಿಸಿದರೆ ಅವರು ಚೆನ್ನಾಗಿಯೇ ಕೆಲಸಮಾಡುತ್ತಾರೆ ಎಂದು ನನಗೆ ಗೊತ್ತು. ಆದರೆ ಅವರು ಜಿಲ್ಲೆಯಲ್ಲಿ ಪ್ರವಾಸ ಹೋಗಬೇಕಾಗುತ್ತದೆ, ಹಾಗೆ ಹೋಗುವುದಕ್ಕೆ ಅವರಿಗೆ ಸೌಲಭ್ಯವನ್ನುಂಟುಮಾಡಿ ಕೊಡಬೇಕು. ಅವರಿಗೆ ಕಾರು ಕೊಡಬೇಕು, ಮತ್ತು ಹಣವನ್ನು ಒದಗಿಸಬೇಕಾಗುತ್ತದೆ. ಈ ಅಭಿವೃದ್ಧಿ ಕಾರ್ಯಗಳಿಗೆ ನಾವು ಈಗ ಕೊಟ್ಟಿರುವ ಹಣದಲ್ಲಿ ಒಂದು ಭಾಗವನ್ನು ಇದಕ್ಕೋಸ್ಕರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದರಿಂದ ಅಭಿವೃದ್ಧಿಕಾರ್ಯಗಳಿಗೆ ಹಣ ಕಡಮೆಯಾಗುತ್ತದೆನ್ನುವುದು ನನ್ನ ಅಭಿಪ್ರಾಯ.

ಇಷ್ಟೇ ಅಲ್ಲ, ಇವರಿಗೋಸ್ಕರ ಒಂದು ಕಚೇರಿ ವಗೈರೆ ಎಲ್ಲವನ್ನೂ ಏರ್ಪಾಡು ಮಾಡಬೇಕಾಗುತ್ತದೆ. ಒಬ್ಬ ಖಾನಗಿ ದೊಡ್ಡ ಮನುಷ್ಯನನ್ನು ಕೂಡಿಸಿ, ಯಾವ ವಿಧವಾದ ಅಧಿಕಾರವನ್ನೂ ಅವರಿಗೆ ಕೊಡದೆ, ಯಾವ ಸೌಲಭ್ಯಗಳನ್ನೂ ಕೊಡದೆ ನಾಮಕಾವಾಸ್ತೆ ಎಂದರೆ ಹೆಸರಿಗೆ ಮಾತ್ರ ಚೇರ್‌ಮನ್ ಆಗಿ ಇರಿ ಎಂದು ಹೇಳುವುದು ಆ ಖಾನಗಿ ದೊಡ್ಡ ಮನುಷ್ಯನ ಗೌರವಕ್ಕೆ, ಸ್ಥಾನಮಾನಕ್ಕೆ ಸರಿಯಾಗಿರುವುದಿಲ್ಲವೆಂದು ತಿಳಿದು ಡೆಪ್ಯುಟಿ ಕಮಿಷನರೇ ಚೇರ್‌ಮನ್ ಆಗಿರಲಿ ಎಂದು ಸೆಲೆಕ್ಟ್ ಕಮಿಟಿಯಲ್ಲಿಯೂ ಅನೇಕ ಜನ ಒಪ್ಪಿಕೊಂಡಿದ್ದಾರೆ. ಅದರೆ ಅಲ್ಲಿದ್ದವರೆಲ್ಲರೂ ಒಪ್ಪಿದರು ಎಂದು ಹೇಳುವುದಿಲ್ಲ. ಈಗಾಗಲೇ ಅದಕ್ಕೆ ತಿದ್ದುಪಡಿ ಬಂದು, ಮಾನ್ಯ ಸದಸ್ಯರೆಲ್ಲರೂ ಖಾನಗಿ ದೊಡ್ಡ ಮನುಷ್ಯರೇ ಡಿಸ್ಟ್ರಿಕ್ಟ್ ಕೌನ್ಸಿಲನ ಅಧ್ಯಕ್ಷರಾಗಿರಬೇಕು, ಎಂ.ಪಿ. ಅಥವಾ ಎಂ.ಎಲ್.ಎ. ಇರಬೇಕು ಎಂದರೆ ನನ್ನ ಅಡ್ಡಿ ಅದಕ್ಕೆ ಇಲ್ಲವೆನ್ನುವುದನ್ನೂ ತಿಳಿಸುತ್ತಿದ್ದೇನೆ. ಆದರೆ ಒಂದು ಮಾತನ್ನು ಮಾತ್ರ ಸ್ಪಷ್ಟ ಪಡಿಸಬೇಕೆಂದಿದ್ದೇನೆ. ಇದಕ್ಕಾಗಿ ಹೆಚ್ಚು ಹಣವನ್ನು ಒದಗಿಸುವುದು ಅಗತ್ಯವಾಗಿದೆ ಎನ್ನುವುದನ್ನು ಮಾತ್ರ ತಾವು ತಿಳಿದುಕೊಂಡು ಆ ತಿದ್ದುಪಡಿಗೆ ಅಂಗೀಕಾರ ಮಾಡಬೇಕೆಂದು ತಮಗೆ ವಿನಂತಿಮಾಡಿಕೊಳ್ಳುತ್ತೇನೆ.

ಚೀಫ್ ಎಕ್ಸಿಕ್ಯೂಟಿವ್ ಆಫೀಸರಿಗೆ ಬಹಳ ಅಧಿಕಾರವನ್ನು ಕೊಟ್ಟಿದ್ದೀರಿ, ಎಲ್ಲ ನೌಕರರನ್ನು ನೇಮಿಸುವ ಅಧಿಕಾರ, ಅವರನ್ನು ತೆಗೆದುಹಾಕುವುದು, ಅವರಿಗೆ ಶಿಕ್ಷೆ ವಿಧಿಸುವುದು ಇವೆಲ್ಲ ಅಧಿಕಾರಗಳನ್ನೂ ಅವರಿಗೇ ಕೊಟ್ಟಿದ್ದೀರಿ, ತಾಲ್ಲೂಕು ಬೋರ್ಡಿಗೆ ಏನೂ ಅಧಿಕಾರವಿಲ್ಲ, ಅವನು ಒಬ್ಬ ಸರ್ವಾಧಿಕಾರಿ, ಮನಸ್ಸೇಚ್ಛೆಯಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ, ಮನಸ್ಸಿಗೆ ಬಂದವರನ್ನು ಸೇರಿಸಿ, ಇಚ್ಛೆ ಬಂದರೆ ತೆಗೆದುಹಾಕುವುದು ಇಂಥ ಪರಿಸ್ಥಿತಿಗಳಿರುವುದು ಸರಿಯಲ್ಲ, ಎಂದು ಹೇಳಿದರು. ನ್ಯಾಯವಾಗಿ ಈ ಅಧಿಕಾರವೆಲ್ಲ ಡಿಸ್ಟ್ರಿಕ್ಟ್ ಕೌನ್ಸಿಲಗೆ ಕೊಡಿ, ಅಲ್ಲಿ ಡೆಪ್ಯುಟಿ ಕಮಿಷನರ ಜೊತೆಗೆ ಮೂರುನಾಲ್ಕು ಜನ ಸದಸ್ಯರನ್ನು ಒಳಗೊಂಡಂಥ ಒಂದು ಸಣ್ಣ ಸಮಿತಿಯನ್ನು ಏರ್ಪಾಡುಮಾಡಿ ಆ ಸಮಿತಿಗೆ ಎಲ್ಲ ಅಧಿಕಾರವನ್ನೂ ಕೊಡಿ ಎಂದು ಒಬ್ಬಿಬ್ಬರು ಸಲಹೆಯನ್ನು ಕೊಟ್ಟರು. ಮತ್ತೆ ಕೆಲವರು ತಾಲ್ಲೂಕು ಬೋರ್ಡ್ ಚೇರ್ಮನ್ ಅಥವಾ ತಾಲ್ಲೂಕು ಬೋರ್ಡ್ ಸದಸ್ಯರಿಗೆ ಕೊಡಬೇಕೆಂದು ಅಭಿಪ್ರಾಯವನ್ನು ಕೊಟ್ಟರು. ಈ ವಿಷಯದಲ್ಲಿ ನನ್ನ ಅಭಿಪ್ರಾಯ ಸ್ಪಷ್ಟವಾಗಿದೆ. ಅಧಿಕಾರಿಗಳನ್ನು ನೇಮಿಸತಕ್ಕ ಒಂದು ಅಧಿಕಾರ, ನೌಕರರನ್ನು ನೇಮಿಸತಕ್ಕ ಅಧಿಕಾರ ತಾಲ್ಲೂಕು ಬೋರ್ಡ್‌ಗಳ ಕೈಯಲ್ಲಿ ಇರಬಾರದು ಎನ್ನುವುದು ನನ್ನ ಅಭಿಪ್ರಾಯ. ನೌಕರರನ್ನು ನೇಮಕಮಾಡತಕ್ಕ ಅಧಿಕಾರ ಬೇರೆಯವರ ಹಸ್ತದಲ್ಲಿದ್ದರೆ ತಾಲ್ಲೂಕು ಬೋರ್ಡಿನ ಕೆಲಸದಲ್ಲಿ ವಿಪರೀತವಾದಂಥ ವಿಚಿತ್ರ ಪರಿಸ್ಥಿತಿ ಉಂಟಾಗುವುದಿಲ್ಲ. ಒಬ್ಬನನ್ನು ನೇಮಕ ಮಾಡುವುದರಲ್ಲಿ ತಾಲ್ಲೂಕು ಬೋರ್ಡಿನಲ್ಲಿ ಭಿನ್ನಾಭಿಪ್ರಾಯಗಳು ಬಂದು ಬಿಡಬಹುದು. ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟರಿಗೆ ಆ ಅಧಿಕಾರವನ್ನು ಕೊಟ್ಟರೆ ಆತನ ಕೈ ಕೂಡ ಕಟ್ಟಿ ಹೋಗುತ್ತದೆ ರೂಲ್ಸ್ ಪ್ರಕಾರ ಪ್ರತಿಯೊಂದೂ ನಡೆಯಬೇಕಾಗಿರುವುದರಿಂದ ಚೀಫ್ ಎಕ್ಸಿಕ್ಯೂಟಿವ್ ಆಫೀಸರು ಸರ್ವಾಧಿಕಾರಿಯಾಗುತ್ತಾರೆಂದು ಹೇಳುವುದು ಸರಿಯಲ್ಲವೆಂದು ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತಿದ್ದೇನೆ. ಸಾಮಾನ್ಯವಾಗಿ ತಮ್ಮೆಲ್ಲರಿಗೂ ಗೊತ್ತಿರುವ ಹಾಗೆ ಈ ಮಸೂದೆಯಲ್ಲಿರುವುದನ್ನು ತಾವು ನೋಡಬಹುದು, ಅಲ್ಲಿ ಏನಿದೆ ಎಂದರೆ, Actually the power given under the Bill, is to appoint, subject to such rules as the Government may make in this behalf, qualified persons to such posts as may be filled up by him. It may be brought to the notice of this House that the Mysore Public Service Commission and Conduct of Business and Additional Functions Regulation is already accepted by the Legislative Assembly and is to be discussed by the Legislative Council. Under this, the Public Service Commission is required to be consulted on all matters realting to the recruitment to services and posts under the local authority and on the principles to be followed in making appointments to the services and posts under the local authority and the Government will make rules regarding the procedure to

(ಶ್ರೀ ಟಿ. ಸುಬ್ರಹ್ಮಣ್ಯ)

be followed by the local authority or any other competent authority for consultation with the Public Service Commission. In addition, Government will also make rules under the Village Panchayats and Local Boards Bill under clause 210 (2) (*k*) in respect of recruitment of officers and servants and their qualifications. So the powers of the chief executive officers to appoint persons will be strictly circumscribed by the rules framed under the Mysore Public Service Commission and Conduct of Business and Additional Functions Regulation and the present legislation when it becomes law and he will not exercise any wide powers of patronage as is thought of.

ಈ ಅಧಿಕಾರವನ್ನು ತಾಲ್ಲೂಕು ಬೋರ್ಡ್‌ಗಳಿಗೆ ಕೊಟ್ಟರೂ ಕೂಡ ಅವರೂ ಈ ನಿಯಮಗಳನ್ನು ಪಾಲನಬೇಕಾಗುತ್ತದೆ. ಈ ನಿಯಮಗಳನ್ನು ಪಾಲಿಸಿಕೊಂಡು ಅವರು ತಮ್ಮ ನೌಕರರನ್ನು ನೇಮಿಸಿಕೊಳ್ಳಬೇಕಾಗಿರುವುದರಿಂದ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ನಲಹೆಯನ್ನು ಪ್ರತಿಯೊಂದು ಸಂದರ್ಭದಲ್ಲಿಯೂ ತೆಗೆದುಕೊಂಡು ಅವರು ಹೇಳುವಂತೆ ಮುಕ್ಕಾಲು ಮೂರು ವೀಸೆ ಪಾಲು ನಡೆಯುಬೇಕಾಗಿರುವುದರಿಂದ ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಆದವರಿಗೆ ಈ ಅಧಿಕಾರವಿದ್ದರೆ ಒಳ್ಳೆಯದೆಂದು ನನ್ನ ಅಭಿಪ್ರಾಯ. ಯಾವ ಒಬ್ಬ ಮಂತ್ರಿಯೇ ಆಗಲ, ಯಾರೇ ಆಗಲ ಒಬ್ಬ ನೌಕರನನ್ನು ನೇಮಿಸಿಕೊಳ್ಳತಕ್ಕ ಅಧಿಕಾರ ದ್ದರೆ, ಆ ರೀತಿ ನೇಮಿಸಿಕೊಳ್ಳುವ ವೇಳೆಗೆ ಸಾಮಾನ್ಯವಾಗಿ ಮನುಷ್ಯನಾದವನು ತನ್ನ ಸ್ವಂತ ಬುದ್ಧಿಯನ್ನು ಪಯೋಗಿಸಿ ತನಗೆ ಬೇಕಾದವರನ್ನು ಸೇರಿಸಿಕೊಳ್ಳತಕ್ಕ ಒಂದು ಸಂಭವವುಂಟು. ಎಲ್ಲರೂ ಹಾಗೆಯೇ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ, ಯಾರೇ ಆಗಲ ಒಂದು ಗೆರೆಯನ್ನು ಹಾಕಿ, ಅಥವಾ ಒಂದು ನಿಯಮವನ್ನು ಹಾಕಿ ಆ ಪ್ರಕಾರ ನಡೆಯಬೇಕು ಎಂದು ಹೇಳಿದರೆ ಆ ಗೆರೆಗೆ ಸರಿಯಾಗಿ ಹೆಜ್ಜೆ ಇಡಬಹುದು, ತಪ್ಪು ಮಾಡುವುದಕ್ಕೆ ಕಾರಣವಿರುವುದಿಲ್ಲ. ಹಾಗಿಲ್ಲದಿದ್ದರೆ ಸ್ವಂತ ಬುದ್ಧಿಯಿಂದ ಮಾಡುವುದಕ್ಕೆ ಅವಕಾಶವಾಗುತ್ತದೆ. ನಿಯಮ ನಿಬಂಧನೆಗಳೆಲ್ಲವನ್ನೂ ಮಾಡಿ ಈ ಅಧಿಕಾರವನ್ನು ಚೀಫ್ ಎಕ್ಸಿಕ್ಯೂಟಿವ್ ಆಫೀಸರಿಗೆ ಕೊಡುವುದು ಒಳ್ಳೆಯದು, ಅದರಿಂದ ತಾಲ್ಲೂಕು ಬೋರ್ಡಿನ ಕೆಲಸ ಸುಲಭವಾಗಿ ಅಡಚಣೆ ಇಲ್ಲದೆ ಯಾವ ವಿಧವಾದ ಆತಂಕವಿಲ್ಲದೆ ನಡೆಯುತ್ತದೆ ಎನ್ನತಕ್ಕ ನನ್ನ ವಾದವನ್ನು ತಮ್ಮ ಮುಂದೆ ಇಟ್ಟಿದ್ದೇವೆ.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಚೇರ್‌ಮರ್ ಅವರ ಕೆಲಸವೇನು ? ಅವರು ಮೀಟಿಂಗ್ ಮಾಡುವುದು. ಅವರಿಗೆ ಎಕ್ಸಿಕ್ಯೂಟಿವ್ ಆಫೀಸರ ಮೇಲೆ ಏನು ಅಧಿಕಾರವಿದೆ ? ಮತ್ತು ಇನ್‌ಸ್ಪೆಕ್ಷನ್ ವಗೈರೆ ಕೆಲಸಕಾರ್ಯಗಳಲ್ಲಿ ಚೇರ್‌ಮರ್‌ಗಳಿಗೂ ಮತ್ತು ಚೀಫ್ ಎಕ್ಸಿಕ್ಯೂಟಿವ್ ಆಫೀಸರಿಗೂ ವ್ಯತ್ಯಾಸ ಬಂದರೆ ಅಥವಾ ಚೀಫ್ ಎಕ್ಸಿಕ್ಯೂಟಿವ್ ಆಫೀಸರಿಗೂ ಚೇರ್‌ಮರ್‌ಗಳಿಗೂ ಸಿಬ್ಬಂದಿ ವಿಚಾರದಲ್ಲಿ ಅಭಿಪ್ರಾಯ ವ್ಯತ್ಯಾಸ ಬಂದರೆ, ಸಿಬ್ಬಂದಿ ಚೇರ್‌ಮರ್‌ಗಳಿಗೆ ಅಗೌರವಪಡಿಸಿದರೆ ಅದಕ್ಕೆ ಚೀಫ್ ಎಕ್ಸಿಕ್ಯೂಟಿವ್ ಆಫೀಸರು ಸಹಾಯಮಾಡಿದರೆ ಅಂಥ ಸಂದರ್ಭಗಳಲ್ಲಿ ಏನೇನು ಅಧಿಕಾರವಿದೆ, ಚೇರ್‌ಮರ್‌ರ ಸ್ಥಾನಮಾನವೇನು, ಎನ್ನುವುದನ್ನು ತಿಳಿಸಬೇಕು.

ಶ್ರೀ ಟಿ. ಸುಬ್ರಹ್ಮಣ್ಯ.—ಸ್ವಾಮಿ, ಅವರು ಸೂಚಿಸಿದ ಎಲ್ಲ ಪಾಯಿಂಟುಗಳಿಗೂ ನಾನು ಜವಾಬು ಕೊಡುವುದಕ್ಕೆ ಸಿದ್ಧನಿದ್ದೇನೆ. ಮುನಿಸಿಪಲ್ ಕೌನ್ಸಿಲರವರಿಗೆ ಏನು ಅಧಿಕಾರವಿದೆ ಎನ್ನುವುದನ್ನೂ ಹೇಳುತ್ತೇನೆ. ಸಾಮಾನ್ಯವಾಗಿ ಸರಕಾರದ ಮಟ್ಟದಲ್ಲಿ ಮಂತ್ರಿಗಳಿಗೆ ಏನು ಅಧಿಕಾರವಿದೆ ಎನ್ನುವುದನ್ನೂ ಹೇಳುತ್ತೇನೆ. ತಾಲ್ಲೂಕು ಬೋರ್ಡಿನ ಚೇರ್ಮನ್ನರವರಿಗೆ ಅವರ ನೌಕರರ ವಿಷಯದಲ್ಲಿ ಏನು ಅಧಿಕಾರವಿದೆ ಎನ್ನುವುದನ್ನೂ ಹೇಳುತ್ತೇನೆ. General supervision and control and everything is vested in him. ಸಾಮಾನ್ಯವಾಗಿ ತಾಲ್ಲೂಕು ಬೋರ್ಡಿನ ದುಡ್ಡನ್ನು ತಾಲ್ಲೂಕು ಬೋರ್ಡಿನ ಚೇರ್ಮನ್ನರಿಗೆ ಕೊಡುವುದಿಲ್ಲ. ನಾನು ಈಗ ಒಬ್ಬ ಮಂತ್ರಿಯಾಗಿದ್ದೇನೆ. ಟ್ರೆಜರಿಯಲ್ಲಿ ದುಡ್ಡಿದೆ. ಅದನ್ನು ನಾನು ಟ್ರೆಜರಿಗೆ ಹೋಗಿ ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲ. ಅದನ್ನೆಲ್ಲ ಸರಕಾರದ ನೌಕರರೇ ಮಾಡಲಿ ಎಂದು ಅವರ ಮೇಲೆ ಒಂದು ಅಧಿಕಾರವನ್ನು ಹಾಕಲಾಗಿದೆ. ಅವರ ಮೇಲೆ ಒಂದು ಹತೋಟಿಯನ್ನು ಇಟ್ಟುಕೊಂಡು ದೇಶದ ಹಣ ಎಲ್ಲ ಕಾಲದಲ್ಲಿಯೂ ಸದ್ವಿನಿಯೋಗ ವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಅನೇ ರೀತಿ ತಾಲ್ಲೂ ಬೋರ್ಡಿನಲ್ಲಿಯೂ ಈ ಅಧಿಕಾರ ಇರಲೆಂಬ ದೃಷ್ಟಿಯಿಂದ ಈ ರೀತಿ ಮಾಡಲಾಗಿದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಅನರಿಗೆ ಬರೀ ಅಧಿಕಾರ ಉಂಟು. ಈಗ ಕಾರ್ಪೊರೇಷನ್ನಿನಲ್ಲಿ ಒಬ್ಬರು ಕಮಿಷನರು ಇರುತ್ತಾರೆ. ಆದರೆ ಇಲ್ಲಿ ಕಮಿಷನರ್ ಇದ್ದಾರೆ ಎಂದು ಮೇಯರವರಿಗೆ ಹತೋಟಿ ಇಲ್ಲ ಎಂದು ಹೇಳುವುದಕ್ಕಾಗುತ್ತದೆಯೇ ? ಆಗುವುದಿಲ್ಲ. ಅದೇ ರೀತಿ ಸಿಟಿ ಮುನಿಸಿಪಾಲಿಟಿಗಳಲ್ಲಿಯೂ ಕಮಿಷನರು ಎನ್ನುವ ಅಧಿಕಾರಿ ಇರುತ್ತಾರೆ. ಅವರಿಗೆ ಕೆಲವು ಅಧಿಕಾರಗಳು ಉಂಟು. ಕಮಿಷನರು ಸರಕಾರಿ ನೌಕರರಾದರೂ subject to the rules guiding the appointments ಅವರು ಕೆಲಸ ಮಾಡುತ್ತಾರೆ. ಇದೇ ರೀತಿಯಾಗಿ ಇಲ್ಲಿಯೂ ಕೊಡುವುದು ಒಳ್ಳೆಯದು ಎಂದು ನಾನು ಅಭಿಪ್ರಾಯಪಡುತ್ತೇನೆ. ಇದೆಲ್ಲ ಅಲ್ಲಿ ಕೆಲಸ ಮಾಡುವ ಮನುಷ್ಯನಮೇಲೆ ಬೀಳುತ್ತದೆ. ಇದನ್ನೆಲ್ಲ ಜನರಲ್ ಆಗಿ ಡಿಸ್‌ಕಸ್ ಮಾಡುವುದು ಸರಿಯಲ್ಲ. ಇದನ್ನೆಲ್ಲ ಹೇಳಿದರೆ ಅಪ್ರಾನಂಗಿಕ ಎಂದರೆ it will become irrelevant. ಇಲ್ಲಿ ಈಗ ಏನು ಬದಲಾವಣೆಗಳನ್ನು ಮಾಡಿದೆಯೋ ಅದರ ವಿಚಾರ ಮಾತ್ರ ಮಾತನಾಡುತ್ತೇನೆ. ಇಲ್ಲಿ ಚೇರ್ಮನ್ನರು ಯಾರು ಆಗುತ್ತಾರೋ ಅವರ ಮೇಲೆ ಅದು ನಿರ್ಧಾರವಾಗುತ್ತದೆ. ಕುದುರೆಯ ಸವಾರ ಸರಿಯಾಗಿದ್ದರೆ ಅವನು ಅದರ ಲಗಾಮು ಹಿಡಿದು ಹೇಗೆ ಸರಿಯಾಗಿ ಕರೆದುಕೊಂಡು ಹೋಗುತ್ತಾನೆಯೋ ಆ ರೀತಿಯಲ್ಲಿ ಇಲ್ಲಿರುವ ಚೇರ್ಮನ್ ಆಗಿರುವವನು ನಿಷ್ಪೆಯಾಗಿ, ನ್ಪಷ್ಪವಾಗಿ ಕೆಲಸ ಮಾಡುವವನಾದರೆ ಎಲ್ಲರನ್ನೂ ಹತೋಟಿಯಲ್ಲಿಟ್ಟುಕೊಳ್ಳಬಹುದು. ತೆಲುಗು ಭಾಷೆಯಲ್ಲಿ ಹೇಳುವಂತೆ "ಪಾಲ್ ವಿಂಡ" ದಂತೆ ಇನ್ನೊಬ್ಬರ ಹೇಳಿಕೆಯಂತೆ ಹೋಗಬಹುದು ಎಂದು ಆಗಬಾರದು. ನಮ್ಮ ಉದ್ದೇಶವಿಷ್ಟೇ. ಲೋಕಲ್ ಬೋರ್ಡುಗಳಲ್ಲಿ ಕೆಲಸ ಮಾಡಿ ಚೆನ್ನಾಗಿ ತರಬೇತಿ

ಯನ್ನು ಪಡೆದು ಹೊಸದಾಗಿ ಲೀಡರುಷಿಪ್ಪುಗಳನ್ನು ಬೆಳೆಸಿ ಮುಂದಕ್ಕೆ ಬಂದು ಕೆಲಸ ಮಾಡಿದರೆ, ಮುಂದೆ ಅಸೆಂಬ್ಲಿಯಲ್ಲಿಯೂ ಚೆನ್ನಾಗಿ ಕೆಲಸ ಮಾಡುವುದಕ್ಕೆ ಸಿದ್ಧರಾಗಬಹುದು ಎನ್ನುವ ಉದ್ದೇಶದಿಂದ ಮಾಡಲಾಗಿದೆ.

ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಡಿಸ್ಟ್ರಿಕ್ಟು ಡೆವಲಪ್‌ಮೆಂಟು ಕೌನ್ಸಿಲ್ಲಿನಲ್ಲಿ ಒಂದು ಸಮಿತಿ ಮಾಡಿ ಒಂದು ಕೇಡರನ್ನು ಮಾಡಬೇಕೆಂದು ಸೂಚನೆ ಮಾಡಿದ್ದೆವು. ತಾವು ಈಗ ಇಲ್ಲಿ ಚೀಫ್ ಎಕ್ಸಿಕ್ಯುಟೀವ್ ಆಫೀಸರವರಿಂದಲೇ ಎಲ್ಲ ನೇಮಕಗಳನ್ನೂ ಮಾಡಬೇಕು ಎಂದು ಮಾಡಿರುವುದರಿಂದ ಒಂದು ಕಡೆ ಒಬ್ಬ ಕಾರಕೂನನ್ನು ಆಗಲಿ ಆಥವಾ ಒಬ್ಬ ಓವರ್ ಸೀಯರನ್ನಾಗಲಿ ಅವರು ನೇಮಕ ಮಾಡುವಾಗ ಅವರಿಗೆ ಬೇಕಾದ ವರ್ಗದವರನ್ನು ನೇಮಕಮಾಡಿಕೊಂಡರು ಎನ್ನುವ ಪ್ರಸಂಗ ಒದಗಬಾರದು ಎಂದು ಜಿಲ್ಲಾ ಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿ ಅವರ ಮೂಲಕ ನೇಮಕಗಳನ್ನು ಮಾಡುವುದು ಸೂಕ್ತವಾಗಿ ಕಾಣುತ್ತದೆ. ಹೀಗೆ ಚೀಫ್ ಎಕ್ಸಿಕ್ಯೂಟೀವ್ ಆಫೀಸರಿಗೆ ಅಧಿಕಾರ ಕೊಡುವುದು ಸರಿಯಲ್ಲ. ಈ ಒಂದು ವಿಚಾರದಲ್ಲಿ ಗಮನಕೊಟ್ಟು ತಾವು ಜಿಲ್ಲೆಯ ಮಟ್ಟದಲ್ಲಿ ಒಂದು ಕೇಡರಿನಂತೆ ಮಾಡುವುದು ಸೂಕ್ತ ಎಂದು ನಮ್ಮೆಲ್ಲರ ಅಭಿಪ್ರಾಯವಾಗಿದೆ. ಇದನ್ನು ತಾವು ಇನ್ನೂ ವಿಚಾರಮಾಡಬೇಕು. ಚೀಫ್ ಎಕ್ಸಿಕ್ಯುಟೀವ್ ಆಫೀಸರನ್ನು ತಾಲ್ಲೂಕು ಬೋರ್ಡ್ ಚೇರ್ಮನ್ನರನ್ನಾಗಿ ಮಾಡಿ ಈ ಸಮಿತಿಗೆ ಯಾವ ಅಧಿಕಾರವನ್ನು ಕೊಡದೇ ಹೋದರೆ ಇದು ಸರಿಯಾಗಿರುವುದಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯ.—ಶ್ರೀಮಾನ್ ಪಾಟೀಲರವರು ಹೇಳಿದ ವಿಷಯವನ್ನು ಗ್ರಹಿಸಿದ್ದೇನೆ. ನಮ್ಮ ಉದ್ದೇಶವಿರುವುದು ಇಷ್ಟೇ. ಸ್ಥಳೀಯ ಸಂಸ್ಥೆಗಳೇ ಅವರಿಗೆ ಬೇಕಾದ ನೌಕರರನ್ನು ನೇಮಕ ಮಾಡಿಕೊಳ್ಳಲಿ ಎಂದು ಇಟ್ಟುಕೊಂಡಿದ್ದೇನೆ. ಈ ನೌಕರರು ದಕ್ಷತೆಯಿಂದ ಕೆಲಸ ಮಾಡಲು ಅವರನ್ನು ಸ್ಥಳದಿಂದ ಸ್ಥಳಕ್ಕೆ ವರ್ಗಾಯಿಸಬೇಕೆಂದು ಮತ್ತು ಅವರೆಲ್ಲರೂ ಸರಕಾರದ ಹತೋಟಿಯಲ್ಲಿರಬೇಕು ಎಂದು ಲೋಕಲ್ ಸರ್ವಿಸಸ್‌ನ ಸ್ಪೆಷಲ್ ಕೇಡರ್ ಎನ್ನುವುದನ್ನು ಮಾಡುತ್ತೇವೆ ಎಂದು ಈ ಮೊದಲೇ ಹೇಳಿದ್ದೇನೆ. ಕೆಲವು ಮುನಿಸಿಪಾಲಿಟಿಗಳಲ್ಲಿ ಹದಿನೈದು ವರ್ಷಗಳಿಂದ ಒಂದೇ ಕಡೆಯಲ್ಲಿ ಒಬ್ಬ ಅಧಿಕಾರಿ ಕೆಲಸ ಮಾಡುವುದು ಸರಿಯಾಗಿಲ್ಲ. ಅವನು ಇಲ್ಲದೇ ಇದ್ದ ಕೆಲಸಗಳನ್ನು ಮಾಡುತ್ತ ರಾಜಕೀಯದಲ್ಲಿ ಭಾಗವಹಿಸಿ ಎಲೆಕ್ಷನ್ ಕಾಲದಲ್ಲಿ ತೊಂದರೆಗಳಾಗಿರುವಂತಹ ಎಷ್ಟೋ ಉದಾಹರಣೆಗಳು ನಮ್ಮ ಮಂತ್ರಿಮಂಡಲದ ಗಮನಕ್ಕೆ ಬಂದಿವೆ. ಅ.ತರಹದ ವಿವರಗಳು ಅನೇಕವಿವೆ. ಅದನ್ನು ಇಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆದುದರಿಂದ ಇದೇ ಮನುಷ್ಯ ಒಂದು ಲೋಕಲ್ ಸಲ್ಫ್ ಗವರ್ನಮೆಂಟಿನ ಒಂದು ಪಂಚಾಯತಿಯಲ್ಲಿ ಬಹುಕಾಲ ಇರುವುದು ಎನ್ನುವುದನ್ನು ಒಪ್ಪುವುದಕ್ಕಾಗುವುದಿಲ್ಲ.

Sri A. S. PATIL.—What about the cadre of Secretaries? Who is the appointing authority, and on what terms and conditions they will be appointed?

Sri T. SUBRAMANYA.—Every officer is liable to be transferred, be he the Secretary, be he the Executive Officer, be he the clerk or anybody; even the Class IV servants are likely to be transferred.

Sri A. S. PATIL.—Who is the appointing authority for the Secretary?

Sri T. SUBRAMANYA.—Every appointment will be made in consultation with the Public Service Commission. I do not want to invest anybody with any power and any non-official members with powers of appointment. That is very clear. So far as I am concerned, I do not want, whether it be Government or a Municipality or the Taluk Board or the Village Panchayat, no non-official body shall have the power of appointing unless in consultation with the Public Service Commission or some other authority meant for that purpose. ನನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿದ್ದೇನೆ. ಅದರಂತೆ ಇದರಲ್ಲಾಗಿರುವ ಬದಲಾವಣೆ ಸೂಕ್ತವಾಗಿದೆ ಎಂದು ತಮ್ಮೆಲ್ಲ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ವಿಲೇಜು ಪಂಚಾಯತಿಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳಿಬಿಟ್ಟು ಮುಗಿಸಿಬಿಡುತ್ತೇನೆ. ವಿಲೇಜು ಪಂಚಾಯತಿಗಳಿಗೆ ಈಗ ಕೊಡುತ್ತಿರುವ ದುಡ್ಡು ಶೇಕಡ ಇಪ್ಪತ್ತರಷ್ಟು ಎಂದಿರುವುದು ಬಹಳ ಕಡಮೆ ಎಂದು ಇಲ್ಲಿ ಹೇಳಿರುವ ಸದಸ್ಯರ ಮಾತುಗಳಿಂದ ಗೊತ್ತಾಗುತ್ತದೆ. ನಾವು ಈಗ ಕೊಡುತ್ತಿರುವ ದುಡ್ಡು ಅವರ ಸಂಬಳಕ್ಕೇ ಎಲ್ಲ ಆಗುತ್ತದೆ, ಅದರಿಂದ ಈ ದುಡ್ಡನ್ನು ಹೆಚ್ಚು ಮಾಡಬೇಕೆಂದು ಇಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ ಸದಸ್ಯರುಗಳ ಆಶಯವಾಗಿದೆ. ಮತ್ತು ಇಲ್ಲಿರುವ ಸದಸ್ಯರುಗಳ ಮುಖ ಚಹರೆಯೂ ಹಾಗೇ ಇದೆ ಎಂದು ಹೇಳುತ್ತೇನೆ. ಇಲ್ಲಿ ಮಾತನಾಡಿದ ಸದಸ್ಯರು ವಿಲೇಜು ಪಂಚಾಯತಿಗಳಿಗೆ ಹಣದ ಅವಶ್ಯಕತೆ ಹೆಚ್ಚಾಗಿದೆ ಮತ್ತು ಈಗ ಶೇಕಡ ಇಪ್ಪತ್ತರಷ್ಟು ಎಂದು ಕೊಡುತ್ತಿರುವುದು ಬಹಳ ಕಡಮೆಯಾಗಿದೆ, ಇದನ್ನು ಶೇಕಡ ಮುವ್ವತ್ತರಷ್ಟು ಮಾಡಬೇಕೆಂದು ಶ್ರೀಮಾನ್ ಎಂ. ಆರ್. ಪಾಟೀಲ್‌ರವರು, ಎ. ಎಸ್. ಪಾಟೀಲ್‌ರವರು, ಪಿ. ಜಿ. ಸಿದ್ಧಾಂತಿಯವರು, ಎಸ್. ಡಿ. ಕೊಠಾವಲೆಯವರು ಮತ್ತು ಇನ್ನೂ ಅನೇಕ ಸದಸ್ಯರು ಎಲ್ಲರೂ ಹೇಳಿದರು.

10 A.M.

ಯಾವನು ಇನ್ನೊಬ್ಬನ ಮನಸ್ಸಿನ ಇಂಗಿತವನ್ನು ತಿಳಿಯಬಲ್ಲನೋ ಅವನಿಗೆ ಸ್ವಲ್ಪ ಪುರಸ್ಕಾರ ಕೊಡಬೇಕಾಗುತ್ತದೆ. ಮೊದಲೇ ಹೇಳಿದಹಾಗೆ ಎರಡು ಮೂರು ಜನಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ತಮ್ಮ ಪಕ್ಷದಲ್ಲಿ ಇರತಕ್ಕ ಜನಗಳ, ನಮ್ಮ ಪಕ್ಷದಲ್ಲಿ ಇರತಕ್ಕ ಮಾನ್ಯ ಸದಸ್ಯರ ಎಲ್ಲರ ಅಭಿಪ್ರಾಯ ಸ್ವಲ್ಪ ಜಾಸ್ತಿ ಮಾಡಬೇಕು ಎಂದು ಮನಗಂಡಿದ್ದೇನೆ. ಎಷ್ಟು ಜಾಸ್ತಿ ಮಾಡಬೇಕು, ಯಾವ ರೀತಿಮಾಡಬೇಕು, ಯಾವ ರೀತಿ ಹಂಡೆ ಬೇಕು ಎನ್ನುವುದರಲ್ಲಿ ಭಿನ್ನಾಭಿಪ್ರಾಯ ಇರುವ ಹಾಗೆ ಕಾಣುತ್ತದೆ. ಬೊಂಬಾಯಿನಲ್ಲಿ ವಿಲೇಜ್ ಪಂಚಾಯತಿಗೆ 30 ಪರ್ಸೆಂಟ್ ಕೊಡುತ್ತಾರೆ. ಕಡಮೆ ಮಾಡಿದರೆ, ಯಾವ ಮುಖ ತೋರಿಸಿ ಸರ್ಕಾರ ನಡೆಸುತ್ತಿದ್ದೀರಿ? ಇದ್ದ ಸೌಕರ್ಯವನ್ನು ಮೊಟಕು

(SRI T. SUBRAMANYA)

ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು 30 ಪರ್ಸೆಂಟ್ ಮಾಡಬೇಕು ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅದನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧವಾಗಿದ್ದೇನೆ. ಆದರೆ ಇರುವ ಸ್ವಲ್ಪ ಅಡಚಣೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಅಡಚಣೆಯನ್ನು ತಡೆಯುವುದಕ್ಕೆ ಆಗುವುದಿಲ್ಲ ಎನ್ನುವ ಅಭಿಪ್ರಾಯದಿಂದ ಹೇಳುತ್ತಾ ಇಲ್ಲ. ಇದನ್ನು ಹೆಚ್ಚಿಸಬೇಕಾದರೆ ಗವರ್ನರ್ ಶಿಫಾರಸ್ಸು ಅಗತ್ಯವಾಗುತ್ತದೆ. ಗವರ್ನರ್ ಅವರ ಶಿಫಾರಸ್ಸನ್ನು ತರಿಸಿ ಎಷ್ಟು ಹೆಚ್ಚಿಸಬೇಕು ಎನ್ನುವುದನ್ನು ಈ ಅಮೆಂಡ್‌ಮೆಂಟ್ ಬಂದಾಗ್ಗೆ ಹೇಳುತ್ತೇನೆ. ಸೋಮವಾರದೊಳಗೆ ಗೌರ್ನರ್ ಅವರ ರೆಕಮೆಂಡೇಷನ್ ತರಿಸಿ ಎಷ್ಟು ಹೆಚ್ಚಿಸಬಹುದು ಎನ್ನುವುದನ್ನು ತಿಳಿಸುತ್ತೇನೆ. ನನ್ನ ಸ್ವಂತ ಅಭಿಪ್ರಾಯವನ್ನು ಕೇಳುವುದಾದರೆ, ಶ್ರೀ ಎಂ. ಆರ್. ಪಾಟೀಲ್ ಮತ್ತು ಅನೇಕ ಮಾನ್ಯ ಸದಸ್ಯರ ಹೇಳುವ ವಿಷಯದಲ್ಲಿ ನನಗೆ ಪೂರ್ಣ ಸಹಾನುಭೂತಿಯಿದೆ.

Sri J. B. MALLARADHYA.—Have you examined Sri Ghorpade's suggestion?

ಶ್ರೀ ಟಿ. ಸುಬ್ರಹ್ಮಣ್ಯ.—I have examined. ತಾವು ಹೇಳತಕ್ಕಂಥಾದ್ದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಹಳ್ಳಿಯಿಂದ ಬಂದ ಕಂದಾಯ ತೆಗೆದುಕೊಂಡು ಸರ್ಕಾರವನ್ನು ನಡೆಸಬೇಕಾಗಿಲ್ಲ. ಹಳ್ಳಿಯಿಂದ ಬಂದ ಹಣದ ಜೊತೆಗೆ ಅವರಿಗೇ ಕೊಡಬೇಕು, ಅದನ್ನು ಒಪ್ಪುತ್ತೇನೆ. ಕೊಡೋಣ ಅವರಿಗೆ ಬೇಕಾದಷ್ಟು ಕೆಲಸಗಳನ್ನೂ ಮಾಡಿಸೋಣ. ಇದರಲ್ಲಿ ಏನೂ ಮುಚ್ಚುಮರೆ ಇಲ್ಲ. ತಾವು ಒಂದು ವೇಳೆ ಈ ಜವಾಬ್ದಾರಿಯನ್ನು ಹೊತ್ತಿದ್ದರೆ, ಇದಕ್ಕೂ ಮುಂದಕ್ಕೆ ಹೆಜ್ಜೆ ಇಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೇನೆ. ನಮಗಿಂತಲೂ ಹೆಚ್ಚು ಮುಂದೆ ಹೋಗುವುದಕ್ಕೆ ಪ್ರಯತ್ನಮಾಡಿದರೆ ಏನು ಅಡಚಣೆಗಳು ಇವೆ ಎಂಬುದನ್ನು ತಿಳಿಸುತ್ತೇನೆ. ನಮ್ಮ ಅಡಚಣೆ, ನಿಮ್ಮ ಅಡಚಣೆ ಒಂದೇ. ಸರ್ಕಾರದ ಕೆಲಸ ಸರಿಯಾಗಿ ನಡೆಯಬೇಕಾದರೆ ಹಣದ ಹಂಚಿಕೆಯಲ್ಲಿ ತೊಂದರೆ ಬರಬಾರದು. ಇರತಕ್ಕ ಹಣವನ್ನು ಆಯಾ ಇಲಾಖೆಗೆ ಸಲ್ಲುವಂತೆ ಮಾಡಬೇಕು. ಪೂರ್ತಿ ಹಣ ಅವರಿಗೆ ಕೊಡಬೇಕು. ಹೀಗೆ ಮಾಡಿಸ್ಸಿದ್ದರೂ ಇಪ್ಪತ್ತು ಸಾಧ್ಯವಾಗುವುದಿಲ್ಲ. ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ.

Sri V. SRINIVAS SHETTY (Coondapur).—The Government were pleased to throw away Rs. 25 lakhs in the name of prohibition within a day. Do the Government believe that this is less important than throwing away Rs. 25 lakhs in the name of prohibition?

ಶ್ರೀ ಟಿ. ಸುಬ್ರಹ್ಮಣ್ಯ.—ಮೊದಲನೆಯದಾಗಿ ಶ್ರೀ ಶ್ರೀನಿವಾಸಶೆಟ್ಟರಿಗೂ ನನಗೂ ಪದ ಪ್ರಯೋಗದಲ್ಲಿ . ವ್ಯತ್ಯಾಸವಿದೆ. ಹಣವನ್ನು ಎಸೆದುಬಿಡುತ್ತಿದ್ದೇವೆ ಎಂದರೆ ನಾವು ಬೀದಿಗೆ ಎಸೆಯುತ್ತಾ ಇಲ್ಲ. ಪ್ರೊಹಿಬಿಷನ್ ವಿಷಯ ಮಾತನಾಡಿದ್ದಾರೆ. "ಒಬ್ಬನಿಗೆ ಹೆಂಡಕುಡಿಸಿ ಅಸನಿಂದ ಹತ್ತು ರೂಪಾಯಿಗಳನ್ನು ತೆಗೆದುಕೊಂಡರೆ ಅದನ್ನು ಏತಕ್ಕೆ ಉಪಯೋಗಿಸುತ್ತೀರಿ? ಅದರಿಂದ ಬಂದ ಹಣ ಎಂದರೆ 2 ಕೋಟಿಯೋ 3 ಕೋಟಿಯೋ ಅವನ ಅಭಿವೃದ್ಧಿ ಗೋಸ್ಕರ ಹೋಗುತ್ತದೆ, ಆ ಹಣವನ್ನು ಶಾಲೆಗೋ ರಸ್ತೆ ಮಾಡುವುದಕ್ಕೋ ಉಪಯೋಗಿಸುತ್ತೀರಿ, ಆದ್ದರಿಂದ ಪ್ರೊಹಿಬಿಷನ್ ತೆಗೆದು ಹಾಕಿ" ಎಂದು ಹೇಳುತ್ತಾರೆ. ಪ್ರೊಹಿಬಿಷನ್ ತೆಗೆದು ಹಾಕಿ ಜನಗಳಿಂದ ಹಣ ಸಿಕ್ಕುವ ಸೌಲಭ್ಯ ಕಲ್ಪಿಸಿ ಮಾಡಿಕೊಂಡು ಅವರಿಂದ ದುಡ್ಡನ್ನು ತೆಗೆದುಕೊಂಡು ಬೇರೆ ವಿಧವಾಗಿ ದೇಶದ ಐಶ್ವರ್ಯ ಜಾಸ್ತಿಯಾಗುವ ಕಾರ್ಯಕ್ರಮ ಹಾಕಿ, ಜನಗಳಿಗೆ ಹೆಚ್ಚಿಗೆ ಅನುಕೂಲ ಮಾಡಬೇಕು. ಮತ್ತು ಜನರ ಉತ್ಪಾದನಾ ಶಕ್ತಿಯನ್ನು ಜಾಸ್ತಿ ಮಾಡಬೇಕು, ಪುನಃ ಹೆಂಡ ಮಾರಬೇಕು ಎಂದು ಹೇಳುತ್ತಾರೆ. ಆದರೆ ಅವನಿಂದ ಹತ್ತು ರೂಪಾಯಿಗಳನ್ನು ತೆಗೆದುಕೊಂಡರೆ ಅವನಿಗೆ ಐದು ರೂಪಾಯಿಗಳು ವಾಪಸ್ಸು ಬರುತ್ತದೋ ಇಲ್ಲವೋ ಎನ್ನುವ ಸಂದರ್ಭ ಇರುವಾಗ, ಹತ್ತು ರೂಪಾಯಿಗಳನ್ನು ಅವನಲ್ಲೇ ಬಿಟ್ಟರೆ ಅದರಿಂದ ಅವನಿಗೆ ಅನುಕೂಲವಾಗುತ್ತದೆ. ಆದ್ದರಿಂದ ಪ್ರೊಹಿಬಿಷನ್‌ಬೇಕು ಎಂದು ಹೇಳತಕ್ಕವನು ನಾನು. ಬಾಕಿ ಮಾರಲ್ ಇನ್ಯೂಸ್ ಬಿಟ್ಟು ಪ್ರೊಹಿಬಿಷನ್‌ನಿಂದ ದೇಶಕ್ಕೆ ಅನುಕೂಲವಾಗುತ್ತದೆ ಎನ್ನುವ ವಾದ ನನ್ನದು. ಅವರ ಎರಡನೆಯ ವಾದ ಕದ್ದು ಮಾರುತ್ತಾರೆ, ಪ್ರೊಹಿಬಿಷನ್ ಬಂದದರಿಂದ ಜನರು ಕಳ್ಳಭಟ್ಟಿ ಸರಾಯಿ ತಯಾರುಮಾಡಿ ಸರ್ಕಾರದವರು ಮಾಡುವುದಕ್ಕಿಂತಲೂ ಚೆನ್ನಾಗಿ ಮಾಡುತ್ತಾರೆ, ಅವರ ಹತ್ತಿರ ಯಾವ ಬೀಗದ ಕೈ ಬೇಕೋ ಆ ಬೀಗದ ಕೈ ಇದೆ. ಅಂಥಾ ಬೀಗದಕೈ ಇಟ್ಟುಕೊಂಡು ಮಾಡುತ್ತಾರೆ ಎಂದು ಹೇಳುತ್ತಾರೆ. ಸರ್ಕಾರ ತನ್ನ ಕಾರ್ಯನಿರ್ವಹಣೆಯನ್ನು ಕ್ಷೀಣಿಸುವುದನ್ನು ತೊಟ್ಟು ಮಾಡುತ್ತಾ ಇಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ಪಾನನಿರೋಧದಿಂದ ದೇಶಕ್ಕೆ ಅನುಕೂಲವಾಗುತ್ತದೆ ಎಂದು ಸ್ಪಷ್ಟಪಡಿಸುತ್ತೇನೆ. ನಾನು ಹಳ್ಳಿಯಿಂದ ಬಂದವನು. ಶ್ರೀ ನರಸಿಂಹೇಗೌಡರ ಊರು ನಮ್ಮ ಹಳ್ಳಿಗಿಂತಲೂ ದೊಡ್ಡ ಊರು. ಅವರು ಪಟ್ಟಣ ವಾಸಿಗಳು. ನಮ್ಮ ಹಳ್ಳಿಯಲ್ಲಿ ಒಂದೊಂದು ಊರಿಗೆ ಹೋಗಬೇಕಾದರೆ ಒಂದು ವಾರವಾಗುತ್ತದೆ. ದೊಡ್ಡ ದೊಡ್ಡ ಮಲೆನಾಡು ಪ್ರಾಂತದಲ್ಲಿ ಬೆಟ್ಟಗುಡ್ಡಗಳು ಇರುವ ಪ್ರದೇಶದಲ್ಲಿ ಪಾನನಿರೋಧವನ್ನು ಜಾರಿಗೆ ತರುವುದರಲ್ಲಿ ತೊಂದರೆಯಾಗಿದೆ ಎಂದು ಹೇಳಿದರು. ಅದನ್ನು ಸರಿಪಡಿಸಬೇಕಾದ್ದು ನಮ್ಮ ಕರ್ತವ್ಯ. ಸರಿಪಡಿಸುವುದರಲ್ಲಿ ಇರತಕ್ಕದ್ದು ನಮ್ಮ ದಕ್ಷತೆಯ ಲಕ್ಷಣ. ದಕ್ಷತೆ ಇಲ್ಲದೆ ಹೋದರೆ ನಾನು ಸ್ವಲ್ಪ ಟೀಕೆಗೆ ತುತ್ತಾಗುತ್ತೇವೆ ಎಂದು ಹೇಳುತ್ತೇನೆ. ನಮ್ಮ ಊರಿನಲ್ಲಿ ಅಂದರೆ ತಾಳಕೆರೆಯಲ್ಲಿ 100ಕ್ಕೆ 20 ಜನ 25 ಜನ ಹೆಂಡವನ್ನು ಕುಡಿಯುತ್ತಿದ್ದರು. ಇವೊತ್ತು ಒಬ್ಬರೂ ಕುಡಿಯುವುದಿಲ್ಲ. ಹರಿಜನ ಹೆಂಗಸರು ಇವೊತ್ತು ಒಳ್ಳೆಯ ಬಟ್ಟೆಯನ್ನು ಹಾಕುತ್ತಿದ್ದಾರೆ. ಅವರಿಗೆ ಒಳ್ಳೆಯದು ಆಗಿರುವುದರಿಂದಲೇ ಇದರಲ್ಲಿ ಒಳ್ಳೆಯ ಉದ್ದೇಶದಿಂದಲೇ ಇದು ಸಫಲವಾಗುತ್ತದೆ ಎಂದು ತಿಳಿದುಕೊಂಡೇ ಇದನ್ನು ಇಂಟ್ರೊಡ್ಯೂಸ್ ಮಾಡಿರುವುದು ಅದಕ್ಕೂ ಇದಕ್ಕೂ ಹೋಲಿಸುವುದಕ್ಕಾಗುವುದಿಲ್ಲ. ಅದು ಒಳ್ಳೆಯದು, ಕೆಟ್ಟದ್ದು ಎಂದು ಹೇಳುವುದಿಲ್ಲ. ಇನ್ನು ಗ್ರಾಮಪಂಚಾಯಿತಿಗಳಿಗೆ 20 ಪರ್ಸೆಂಟ್ ಸಾಲದು 30ಕ್ಕೆ ಹೆಚ್ಚಿಸಬೇಕು ಎಂದು ಸದಸ್ಯರು ಹೇಳಿರುವುದರ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸಿ ಸೋಮವಾರದ ದಿವಸ ತಿಳಿಸುತ್ತೇನೆ ಎಂದು ಹೇಳುತ್ತೇನೆ.

Mr. DEPUTY SPEAKER.—The House will now rise for lunch and meet after half-an-hour.

The House adjourned for Lunch at Ten minutes past Ten of the Clock and re-assembled at Forty Minutes past Ten of the Clock.

[DR. R. NAGAN GOWDA in the Chair.]

ಶ್ರೀ ಟಿ. ಸುಬ್ರಹ್ಮಣ್ಯ.—ಸ್ವಾಮಿ, ಗ್ರಾಮಪಂಚಾಯಿತಿಗೆ ನೂರಕ್ಕೆ 30 ರಂತೆ ಕೊಡಬೇಕೇ ಅಥವಾ ಕಡಮೆ ಕೊಡಬೇಕೇ ಎಂಬ ವಿಷಯ ಚರ್ಚೆಗೆ ಬಂದಿದೆ. ಇದರ ವಿಷಯದಲ್ಲಿ ನನ್ನ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ.

ಈ ಮಧ್ಯೆ ಶ್ರೀ ಘೋರ್ಪಡೆಯವರು ಅವರಜೇ ಒಂದು ಯೋಜನೆಯನ್ನು ನಮ್ಮ ಮುಂದಿಟ್ಟಿದ್ದಾರೆ. ಕೆಲವು ಹಳ್ಳಿಗಳಿಗೆ ಕಂದಾಯ ಜಾಸ್ತಿ ಬಿದ್ದು, ಜಾಸ್ತಿ ಹಣ ವಸೂಲಾಗುತ್ತದೆ. ಇನ್ನು ಕೆಲವು ಹಳ್ಳಿಗಳಿಗೆ ಕಡಮೆ ವಸೂಲಾಗುತ್ತದೆ. ಆದ್ದರಿಂದ ಕಂದಾಯವನ್ನು ಹಂಚುವಾಗ ಎಲ್ಲಾ ಹಳ್ಳಿಗಳಿಗೂ ಜನ ಸಂಖ್ಯೆಗನುಸಾರವಾಗಿ ಹಣ ಬರುವ ಒಂದು ವ್ಯವಸ್ಥೆ ಮಾಡಿ ಎಂದು ಅವರು ಸಲಹೆ ಕೊಟ್ಟಿದ್ದಾರೆ. ಅದಕ್ಕೂ ಗಮನಕೊಟ್ಟು ವಿಮರ್ಶೆಮಾಡಿ, ಅದು ಸಾಧುವೇ ಅಥವಾ ಎಷ್ಟರಮಟ್ಟಿಗೆ ಆಗುವುದಿಲ್ಲ ಎಂಬುದನ್ನು ತಿದ್ದುಪಡಿಗಳನ್ನು ಚರ್ಚಿಸುವಾಗ್ಗೆ ತಿಳಿಸುತ್ತೇನೆ.

ಇನ್ನು ಶ್ರೀ ನರಸಿಂಹೇಗೌಡರು ಹೇಳಿದುದರಮೇಲೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಅವರು ಹೇಳಿದರು, Cattle Poundಗಳ ವಿಷಯದಲ್ಲಿ ದರಗಳನ್ನು ನಮೂದು ಮಾಡಬೇಕೆಂದು ಹೇಳಿದರು. ಅದಕ್ಕೆ ಬೇರೆ Enactment ಇದೆ, ಅದರಲ್ಲಿ ಷೆಡ್ಯೂಲ್ ಇದೆ, ಇಷ್ಟಿಷ್ಟೇ ಹಾಕಬೇಕೆಂದು ನಮೂದುಮಾಡಿದೆ. ಅದರ ಪ್ರಕಾರ ವಿಧಿಸುವುದಕ್ಕೆ ಏನೂ ಅಡ್ಡಿಯಿಲ್ಲವೆಂದು ಭಾವಿಸುತ್ತೇನೆ. ಆದನು ಸೇರಿಸುವುದರ ಅವಶ್ಯಕತೆ ಕಂಡುಬಂದರೆ ರೂಲ್ಸ್‌ನಲ್ಲಿ ಸೇರಿಸುವುದಕ್ಕೆ ಅಡ್ಡಿಯಿಲ್ಲವೆಂದು ಹೇಳುತ್ತೇನೆ.

ಹಳ್ಳಿಗಳಲ್ಲಿ ಜನಶಕ್ತಿ (Man Power) ಬಹಳವಾಗಿದೆ; ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶಮಾಡಿಲ್ಲವೆಂದು ಹೇಳಿದರು. ಶ್ರೀ ರಾಜಯ್ಯ ಶೆಟ್ಟರು ಮಾತನಾಡುತ್ತಾ ಸೋಮವಾರ ಕೆಲಸಕ್ಕೆ (ಬಿಟ್ಟಿ ದುಡಿತದ ಕೆಲಸಕ್ಕೆ) ಅವಕಾಶ ಕಲ್ಪಿಸಿ ಕೊಡಬೇಕಾಗಿತ್ತೆಂದು ಹೇಳಿದರು. ಒಂದು ವಿಷಯ ಈ ಸಂದರ್ಭದಲ್ಲಿ ನೆನಪಿನಲ್ಲಿಡಬೇಕು. ಬಲಾತ್ಕಾರವಾಗಿ ದುಡಿಸಿಕೊಳ್ಳುವುದಕ್ಕೆ ಅವಕಾಶ ಕೊಡಬಾರದು. ಬೇಕಾದರೆ, ಆಯಾ ವಿಲೇಜ್ ಪಂಚಾಯಿತಿಯವರು ಜನರು ಕಾರ್ಯಮಾಡಿಕೊಡುತ್ತೇವೆಂದು ಮುಂದೆ ಬಂದರೆ ಮಾಡಿಸಿಕೊಳ್ಳುವುದಕ್ಕೆ ಕಾನೂನಿನಲ್ಲಿ ಯಾವ ಅಡ್ಡಿಯೂ ಇಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನ ಹಳ್ಳಿ).—ಹಿಂದೆ ಹಳೆಯ ಮೈಸೂರು ಏಕ್ಟಿನಲ್ಲಿ ಆ ರೀತಿ ಅವಕಾಶ ಮಾಡಿರಲಲ್ಲವೇ?

ಶ್ರೀ ಎಂ. ಸಿ. ನರಸಿಂಹ್ (ಕೋಲಾರದ ಚಿನ್ನದ ಗಣಿಗಳು).—ಚಂದ್ರಶೇಖರಯ್ಯರ್ ಕಮಿಟಿಯವರು ಇದನ್ನು ಶಿಫಾರಸ್ಸು ಮಾಡಿರಲಲ್ಲವೇ?

ಶ್ರೀ ಟಿ. ಸುಬ್ರಹ್ಮಣ್ಯ.—Forced Labour ಇರಕೂಡದೆಂದು ಹೇಳಿದೆ. ಈ ಯುಗದಲ್ಲಿ ಅದಕ್ಕೆ ಅವಕಾಶವಿಲ್ಲ. ವಿಲೇಜ್ ಪಂಚಾಯಿತಿಯವರೇ ಏರ್ಪಾಡು ಮಾಡಿಕೊಳ್ಳುವುದಕ್ಕೆ ತೊಂದರೆಯಿಲ್ಲವೆಂದು ಹೇಳುತ್ತೇನೆ.

Sri M. C. NARASIMHAN.—The point is it is, not a question of forced labour but a question of concerned persons converting their taxes into labour.

ಶ್ರೀ ಟಿ. ಸುಬ್ರಹ್ಮಣ್ಯ.—ಅವರು ಹೇಳಿದ ಪ್ರತಿಯೊಂದು ಅಕ್ಷರವನ್ನೂ ಗಮನಿಸಿದ್ದೇವೆ. ಅದರಲ್ಲಿ ಎರಡುಭಾಗ ಇದೆ. ಸೋಮವಾರದ ಬಿಟ್ಟಿಯ ಕೆಲಸ ಒಂದು. ಎರಡನೆಯದು, ಅವರು ಕೊಡಬೇಕಾದ ಕಂದಾಯಕ್ಕೆ ವಜಾ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕಾದದ್ದು. ಸೆಲೆಕ್ಟ್ ಕಮಿಟಿಯಲ್ಲಿ ಈ ಎರಡು ವಿಷಯಗಳೂ ವಾದಕ್ಕೆ ಬಂದುವು. ಮನುಷ್ಯನಿಗೆ ದುಡ್ಡು ಕೊಡುವುದಕ್ಕೂ ಅವಕಾಶವಿರಬೇಕು. ಅಥವಾ ದುಡ್ಡು ಕೊಡುವುದಕ್ಕೆ ಬದಲು ದುಡಿದು ತೀರಿಸುವುದಕ್ಕೂ ಅವಕಾಶವಿರಬೇಕು ಎಂದು ಅಭಿಪ್ರಾಯ ಅಲ್ಲಿ ಬಂತು. ಅದಕ್ಕನುಕೂಲವಾಗುವಂತೆ, ಈ ಬಿಲ್ಲಿನಲ್ಲಿ ದುಡಿಮೆಯನ್ನು ದುಡ್ಡಾಗಿ ಪರಿವರ್ತಿಸಿ, ಆತನು ಕೊಡಬೇಕಾದ ಕಂದಾಯಕ್ಕೆ ವಜಾ ಕೊಡುವುದಕ್ಕೆ ಅಡ್ಡಿಯೇನೂ ಇಲ್ಲ. ಯಾವನಾದರೂ ದುಡ್ಡು ಕೊಡುವುದಕ್ಕೆ ಶಕ್ತನಾಗಿಲ್ಲದಿದ್ದರೆ, ಆತನು ಕೆಲಸ ಮಾಡಿ, ಆ ಕೆಲಸಕ್ಕೆ ಕೂಲಿಯನ್ನು ತೆಗೆದುಕೊಂಡು ತನ್ನ ಕಂದಾಯಕ್ಕೆ ಮಾಡಿಕೊಳ್ಳಲಿ ಎನ್ನಬಹುದು.

Sri C. K. RAJAIAH SETTY.—May I bring to the notice of the Hon'ble Minister section 45 of the old Act where it is said that the panchayat may levy village improvement tax computable with contribution of labour subject to the rules made in this behalf? After all this provision can be inserted.

Sri T. SUBRAMANYA.—I do not know if an amendment is there to that effect. If there is no amendment to that effect I cannot help it now.

ಈಗ ಇರುವ ಪ್ರಕಾರವೂ ಇದಕ್ಕೆ ಅವಕಾಶವಿದೆಯೆಂದು ನನ್ನ ಅಭಿಪ್ರಾಯ. ಯಾವಾದರೂ amendment ತಂದಿದ್ದರೆ ಅದನ್ನು ನಾನು ಪರ್ಯಾಲೋಚನೆಗೆ ತೆಗೆದುಕೊಳ್ಳುವುದಕ್ಕೂ ಸಿದ್ಧನಾಗಿದ್ದೇನೆಂದು ನಾನು ಹೇಳಬಯಸುತ್ತೇನೆ.

ಶ್ರೀ ಎ. ಎಸ್. ಪಾಟೀಲ್.—ಶ್ರೀಮಾನ್ ರಾಜಯ್ಯ ಶೆಟ್ಟರು ಹೇಳಿದಹಾಗೆ ಕೂಲಿಯನ್ನು ಹಣವನ್ನಾಗಿ ಪರಿವರ್ತನೆ ಮಾಡಿಕೊಂಡು ವಜಾ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡುವುದು ಸರಿಯಲ್ಲವೆಂದು ಹೇಳುತ್ತೇನೆ. ಹೀಗೆ ಅವಕಾಶ ಮಾಡಿದ್ದೇ ಆದರೆ ಸುಳ್ಳು ಸುಳ್ಳಾಗಿ ಕೆಲಸ ಮಾಡಿದರೆಂದು ಬರೆದುಕೊಂಡು ವಜಾ ಮಾಡಿಬಿಡುವ ಪ್ರಸಂಗಗಳೂ ಬರುತ್ತವೆ. ದುಡಿತ ಮಾಡಿದರೆ ಅದಕ್ಕೆ ತಕ್ಕಷ್ಟು ಹಣ ತೆಗೆದುಕೊಳ್ಳಲಿ. ಎಷ್ಟೋ ವೇಳೆ ಚೇರ್ಮನ್ನರು ಅಥವಾ ಬೇರೆ ಜನರು ನಮ್ಮನೆ ಕೂಲಿ ಮಾಡಿದರು ಎಂದು ಬರೆಸಿಕೊಂಡು ಕ್ಯಾಷ್ ವಸೂಲಾಗದಿರಬಹುದು.

ಶ್ರೀ ಟಿ. ಸುಬ್ರಹ್ಮಣ್ಯ.—ಎರಡು ಅಭಿಪ್ರಾಯಗಳನ್ನೂ ಗಮನಕ್ಕೆ ತೆಗೆದುಕೊಂಡಿದ್ದೇವೆ.- ಬರಾತ್ಕಾರವೂ ಇಲ್ಲ; ಅಂಥದಕ್ಕೆ ಅವಕಾಶವೂ ಇರಬೇಕು. ಅದಕ್ಕೆ ಏರ್ಪಾಡು ಮಾಡಿದ್ದೇವೆ. ಕೂಲಯನ್ನು ತೆಗೆದು ಕೊಂಡು ಆ ಹಣವನ್ನು ಅಲ್ಲೇ ಕೊಡುವುದಕ್ಕಾಗಲಿ ಅಥವಾ Book adjustment ಆಗಲಿ ಮಾಡುವುದಕ್ಕೆ ಅವಕಾಶವಿದೆಯೆಂದು ಹೇಳುತ್ತೇನೆ.

ಇದಾದಮೇಲೆ, ಇನ್ನು ಕೆಲವು ವಿಷಯಗಳನ್ನು ಸ್ಥೂಲವಾಗಿ ಪ್ರಸ್ತಾಪ ಮಾಡಿ ಮುಗಿಸುತ್ತೇನೆ. ತಾಲ್ಲೂಕು ಬೋರ್ಡುಗಳಲ್ಲಿ ಹರಿಜನರಿಗೆ ಸ್ಥಾನವಾನಗಳನ್ನು ಕಾದಿಡತಕ್ಕದ್ದನ್ನು ಪ್ರಸ್ತಾಪ ಮಾಡಿದ್ದಾರೆ. Original Rule ನಲ್ಲಿ ಅವರಿಗೆ Reservation ಇರಬೇಕೆಂದು ಹೇಳಿ, ಪ್ರತಿಯೊಂದು ಕಾರ್ಪೊರೇಷನ್ ಸಿಯಲ್ಲೂ ಒಂದಿಷ್ಟು ಸ್ಥಾನಗಳನ್ನು ಕಾದಿಡಬೇಕೆಂದು ಮಾಡಿತ್ತು. ಸೆಲೆಕ್ಟ್ ಕಮಿಟಿಯಲ್ಲಿ ಅದನ್ನು ತೆಗೆದು ಹಾಕಿ, ಅವರುಗಳು ನಿರೀಕ್ಷಿಸಿದ ಸಂಖ್ಯೆಯಲ್ಲಿ ಚುನಾಯಿತರಾಗಿ ಬಾರದೆ ಇದ್ದರೆ ಸರ್ಕಾರದವರು ನಾಮಿನೇಟ್ ಮಾಡಬೇಕೆಂದು ಹೇಳಿದರು. ಆದರೆ, ಇಲ್ಲಿ ಸಭೆಯಲ್ಲಿ ಹರಿಜನ ಸದಸ್ಯರು ಮೊದಲದ್ದಹಾಗೆಯೇ ಮಾಡಬೇಕೆಂದು ಹೇಳುತ್ತಿದ್ದಾರೆ. ಅವರ ಇಚ್ಛೆಯಂತೆಯೇ ನಡೆಯುವುದು ಸಮರ್ಪಕವಾದರೂ, ನಾವು ಯೋಚನೆ ಮಾಡಿದ್ದೇನೆಂದರೆ, ರಾಜ್ಯ ವ್ಯವಸ್ಥೆಯಲ್ಲಿ 10-15 ವರ್ಷ ಕಾಲಾವಕಾಶ ಕೊಟ್ಟಿದ್ದರೂ, ಎಲ್ಲಾದರೂ ಒಮ್ಮೆ ಪ್ರಾರಂಭ ಮಾಡಲೇಬೇಕು. ಅವರು ನಮ್ಮ ಜೊತೆಯಲ್ಲಿ general seats ಗೆ contest ಮಾಡಿ ಇತರ ರಾಜಕೀಯ ಪಕ್ಷದವರೊಡನೆ ಹೋರಾಟ ನಡೆಸುವುದಕ್ಕೆ ಪ್ರಯತ್ನ ಮಾಡಬೇಕು. ಈ ದೃಷ್ಟಿಯಿಂದ ಇಲ್ಲಿ ಮೊದಲು ಪ್ರಾರಂಭ ಮಾಡೋಣ ಎಂಬ ಉದ್ದೇಶದಿಂದ ಸೆಲೆಕ್ಟ್ ಕಮಿಟಿಯವರು ಅದನ್ನು ಸಲಹೆ ಮಾಡಿದರು. ಆದರೆ, ಇವತ್ತಿನ ದಿವಸ ಹರಿಜನ ಸದಸ್ಯರೆಲ್ಲರೂ ಒಮ್ಮತದಿಂದ ಈ ರೀತಿ ಬೇಡವೆಂದು ಹೇಳುತ್ತಿರುವುದರಿಂದ, ನಾನು ಅವರ ಸೂಚನೆಯನ್ನು ಅಂಗೀಕಾರ ಮಾಡುವುದಕ್ಕೆ ಹಿಂಜರಿಯುವುದಿಲ್ಲವೆಂದು ಹೇಳುತ್ತೇನೆ. ಅವರೊಂದು ತಿದ್ದುಪಡಿಯನ್ನು ಸೂಚಿಸಿದರೆ ಅದನ್ನು ಒಪ್ಪಿಕೊಳ್ಳುತ್ತೇನೆಂದು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು direct election ಇಡಬೇಕೇ, indirect election ಇಡಬೇಕೇ? ಶ್ರೀಮಾನ್ ನಾರಾಯಣ ಸ್ವಾಮಿಯವರು ಇದನ್ನು ಪ್ರಸ್ತಾಪ ಮಾಡುತ್ತಾ, ತಾಲ್ಲೂಕು ಬೋರ್ಡಿಗೆ direct election ಕೊಟ್ಟಿರುವುದರಿಂದ ಪಂಚಾಯಿತಿಗೂ, ತಾಲ್ಲೂಕ್ ಬೋರ್ಡಿಗೂ ಇರಬೇಕಾದ ನಿಕಟ ಸಂಬಂಧ ತಪ್ಪಿಹೋಗಿ, ಅದೇ ಬೇರೆ, ಇದೇ ಬೇರೆ ಹೋಗುವ ಸಂದರ್ಭವಿರುತ್ತದೆಂದು ಹೇಳಿದರು. ಮಹಾತ್ಮಾ ಗಾಂಧಿಯವರು ಇಲ್ಲಿಂದ ಅಲ್ಲಿಗೆ ಸಂಬಂಧವನ್ನು ಕಲ್ಪನೆ ಮಾಡಿಕೊಂಡು, indirect elections ಇರಬೇಕೆಂದು ಅಭಿಪ್ರಾಯ ಪಟ್ಟಿದ್ದರು, ಈ ಅಂಶವನ್ನು ನಾವು ಪರಿಶೀಲನೆ ಮಾಡಬೇಕೆಂದು ಅವರು ಹೇಳಿದರು.

ಪ್ರಥಮತಃ ಇದ್ದ ಮಸೂದೆಯನ್ನು ನೋಡಿದರೆ, ಅಲ್ಲಿ Indirect Election ಎಂತಲೇ ಇತ್ತು. ಆದರೆ, ಇಲ್ಲಿ general discussion ಆದ ಸಂದರ್ಭದಲ್ಲಿ ಹೊರಪಟ್ಟು ಅಭಿಪ್ರಾಯ ನೋಡಿದಲ್ಲಿ ಎಲ್ಲರೂ Direct Election ನ್ನೇ ಇರಬೇಕೆಂದು ಒತ್ತಾಯ ಮಾಡಿದ್ದಾರೆಂದು ಗೊತ್ತಾಯಿತು. ಅದರಮೇಲೆ ಸೆಲೆಕ್ಟ್ ಕಮಿಟಿಯವರು ಬದಲಾವಣೆ ಮಾಡಿದ್ದಾರೆ. ಬದಲಾವಣೆ ಮಾಡಿದ್ದು ಹೀಗೆಯೇ ಇರಲಿ. ಸ್ವಲ್ಪ ಕಾಲವಾದಮೇಲೆ ಇದನ್ನು ಪುನಃ ಪರಿಶೀಲನೆ ಮಾಡಿ ನೋಡಬಹುದು ಎಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀಮಾನ್ ಘೋರ್ಪಡೆಯವರು ಹೇಳಿದ ವಿಷಯಗಳನ್ನು ಮಾನ್ಯ ಸದಸ್ಯರೆಲ್ಲರೂ ಸ್ವಲ್ಪ ಒಳಹೊಕ್ಕು ನೋಡಬೇಕಾಗುತ್ತದೆ. ಅವರು ಕೊಟ್ಟ ಯೋಜನೆಯ ಪ್ರಕಾರ ಶೇಕಡ 10 ರಷ್ಟು population ಮೇಲೆ, ಶೇಕಡ ಐದರಷ್ಟು ಆ ಪ್ರದೇಶದ Backwardness ಮೇಲೆ ಹಂಚಿಕೆ ಮಾಡಬೇಕೆಂದು ಹೇಳಿದ್ದಾರೆ. ಇದರಿಂದಾಗಿ ಎಲ್ಲರಿಗೂ ಸರಿಯಾಗಿ ಹಣ ಸಹಾಯ ಒದಗುವಂತಾಗುತ್ತದೆಂದು ಹೇಳಿದ್ದಾರೆ. ಇದನ್ನು ಮಾನ್ಯ ಸದಸ್ಯರು ಗಮನಕ್ಕೆ ತೆಗೆದುಕೊಂಡು ಯೋಚೆ ಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

Sri A. S. PATIL.—Most of us have expressed our opinions.

ಶ್ರೀ ಟಿ. ಸುಬ್ರಹ್ಮಣ್ಯ.—ಶ್ರೀಮಾನ್ ಪಾಟೀಲ್ ರವರು ಹೇಳಿದ್ದನ್ನೂ ಕೇಳಿದ್ದೀರಿ. ಶ್ರೀಮಾನ್ ಘೋರ್ಪಡೆಯವರು ಹೇಳಿದ್ದನ್ನೂ ಕೇಳಿದ್ದೀರಿ. ಮಾನ್ಯ ಸದಸ್ಯರು ಶ್ರೀಮಾನ್ ಪಾಟೀಲ್‌ರವರು ತಮ್ಮ ಅಭಿಪ್ರಾಯವೇ ಸರಿಯೆಂದಿಟ್ಟುಕೊಂಡಿದ್ದರೆ ಒಂದು ತಿದ್ದುಪಡಿಯನ್ನು ತಂದು, ಮಿಕ್ಕ ಮಾನ್ಯ ಸದಸ್ಯರ ಮನಸ್ಸನ್ನು ತಮ್ಮ ಕಡೆಗೇ ಒಲಸಿಕೊಳ್ಳುವುದಕ್ಕೆ ಅವರಿಗೆ ಅಧಿಕಾರವಿದೆ. ಶ್ರೀಮಾನ್ ಘೋರ್ಪಡೆಯವರನ್ನು move ಮಾಡಬೇಡಿ ಎಂದು ಹೇಳುವುದಕ್ಕೂ ನಮಗೆ ಅಧಿಕಾರವಿಲ್ಲ. ಅವರು move ಮಾಡಿದಾಗ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಸೂಚಿಸಬಹುದು. ನನ್ನಮಟ್ಟಿಗೆ ಹೇಳುವುದಾದರೆ, ನನ್ನದು ಈ ರೀತಿಯಾಗಿಯೇ ಇರಬೇಕು ಅಥವಾ ಆ ರೀತಿಯಾಗಿಯೇ ಇರಬೇಕೆಂದೇನೂ ಇಲ್ಲ ಎಂದು ಹೇಳಬಯಸುತ್ತೇನೆ.

ಇನ್ನೊಂದು ವಿಷಯ ಬಂದಿತ್ತು. ತಾಲ್ಲೂಕು ಬೋರ್ಡುಗಳಿಗೆ ಎಂ. ಎಲ್. ಎ. ಗಳು, ಎಂ. ಎಲ್. ಸಿ. ಗಳು, ಪಾರ್ಲಮೆಂಟ್ ಸದಸ್ಯರು ಮೆಂಬರಾಗಿರುತ್ತಾರೆ. ಅವರನ್ನು ಸುಮ್ಮನೆ ಅಲ್ಲಿ ಇಟ್ಟುಬಿಟ್ಟರೆ, ಕಿರೀಟವಿಲ್ಲದ ರಾಜ ಎಂದು ಕರೆದಹಾಗಾಗುತ್ತದೆಂದು ಹೇಳಿದರು. ಅವರಿಗೆ ಓಟಿನ ಹಕ್ಕನ್ನು ತೆಗೆದುಹಾಕಿದ್ದೀರಿ, ಹಾಗೆ ಓಟಿನ ಅಧಿಕಾರ ಅವರಿಗೆ ಕೊಡದಿದ್ದರೆ ಅವರನ್ನು ತಾಲ್ಲೂಕು ಬೋರ್ಡಿನ ಮೆಂಬರಾಗಿಯೇ ಮಾಡಬೇಡಿ ಎಂದು ಹೇಳಿದರು. ಎಂ.ಎಲ್.ಎ.ಗಳು, ಸಾಮಾನ್ಯವಾಗಿ ತಾಲ್ಲೂಕು ಬೋರ್ಡುಗಳಿಗೂ ಸರ್ಕಾರಕ್ಕೂ ಮಧ್ಯೆ ಇರತಕ್ಕಂಥ ಜನಗಳ. ತಾಲ್ಲೂಕಿನಲ್ಲಿ ಏನೇನು ಅಭಿವೃದ್ಧಿ ಕಾರ್ಯಗಳಾಗಬೇಕೆಂಬುದನ್ನು ಅವರು ನೋಡಬೇಕು. ಅವರ ಸಲಹೆ ಬೋರ್ಡಿಗೆ ಬೇಕಾಗುತ್ತದೆ. ಅವರು ಅವರ ಜವಾಬ್ದಾರಿಯನ್ನು ವಹಿಸಬೇಕಾದರೆ, ಅವರು ಬೋರ್ಡಿನಲ್ಲಿರುವುದು ಅವಶ್ಯಕ. ಅವರಿಲ್ಲದಿದ್ದರೆ ಭುಜಬಲ ಪರಾಕ್ರಮವನ್ನು ಕತ್ತರಿಸಿ ಹಾಕಿದಂತೆಯೇ. ಅವರು ಅಲ್ಲಿರಬೇಕೆಂದು ನನ್ನ ಅಭಿಪ್ರಾಯ. ಅವರಿಗೆ ಓಟಿನ ಹಕ್ಕು ಕೊಟ್ಟರೆ ಸರಿಹೋಗುತ್ತದೆ. ಸೆಲೆಕ್ಟ್ ಕಮಿಟಿಯಲ್ಲಿ ಇವರು ನುಮ್ಮನೆ ಎಕ್ಸ್ ಅಫಿಷಿಯೋ ಮೆಂಬರಾಗಿದ್ದರೆ ಸಾಕು ಎನ್ನುವ ಅಭಿಪ್ರಾಯ ಕೆಲವರಿಂದ ಬಂದಿತು. ನಾನು ಅಸ್ತು ಎಂದೆ. ಇವತ್ತಿನ ದಿವಸ ನಾನು ನನ್ನ ಮನಸ್ಸನ್ನು ಬದಲಾಯಿಸಿಕೊಳ್ಳುವುದಕ್ಕೆ ತಯಾರಾಗಿದ್ದೇನೆ. ಅಮೆಂಡ್‌ಮೆಂಟ್ ಬಂದಾಗ್ಗೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಎಲ್ಲರೂ ಒಪ್ಪಿ ಶಾನನ ಸಭಾ ಸದಸ್ಯರಿಗೂ ಓಟಿನ

ಪವರ್ ಬೇಕೆಂದು ಹೇಳಿದರೆ ಅದನ್ನು ಒಪ್ಪಲು ಸ್ವಲ್ಪ ಶಕ್ಯ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಈ ಸಭೆಯ ಸದಸ್ಯರಾಗಿ, ಅವರು ತಾಲ್ಲೂಕು ಬೋರ್ಡಿಗೆ ಎಲೆಕ್ಟ್ ಆಗಿ ಬಂದರೆ ಡಿಸ್ ಕ್ವಾಲಿಫಿಕೇಷನ್ ಬರುವುದಿಲ್ಲವೇ!

ಶ್ರೀ ಟಿ. ಸುಬ್ರಹ್ಮಣ್ಯ.—ಅದನ್ನು ನಾನು ವಿಮರ್ಶೆ ಮಾಡಿಲ್ಲ.

Sri M. C. NARASIMHAN.—If Sri Narayanaswamy's suggestion is accepted, then it may amount to an office of profit, if money is paid to the Chairman.

Sri T. SUBRAMANYA.—I brought this to the notice of the House and the Speaker gave a ruling that it does not amount to a disqualification. That is the correct view.

ಇನ್ನೊಂದು ವಿಷಯ ಪ್ರಸ್ತಾಪ ಮಾಡಿದರು. ಅದು ಅತಿ ಮುಖ್ಯವಾದ ವಿಷಯ. ವಿಲೇಜ್ ಪಂಚಾಯತಿ ಚೇರ್ಮನ್ನರನ್ನು ವಿಲೇಜ್ ಪಂಚಾಯತಿ ಸದಸ್ಯರು ಆರಿಸಿಕೊಳ್ಳದೆ, ನೇರವಾಗಿ ಎಲ್ಲಾ ಪ್ರಾಪ್ತ ವಯಸ್ಕರೂ ಓಟು ಕೊಟ್ಟು, ಅಮೇರಿಕದಲ್ಲಿ ಪ್ರೆಸಿಡೆನ್ಸಿಯಲ್ ಎಲೆಕ್ಷನ್ ನಡೆಯುವ ಹಾಗೆ ನಡೆಯಲಿ ಎಂದು ಕೆಲವು ಸದಸ್ಯರು ಹೇಳಿದರು. ಈ ಸಲಹೆಯನ್ನು ಮದ್ರಾಸಿನಲ್ಲಿ ಪ್ರಯತ್ನ ಪಟ್ಟು, ಬಿಟ್ಟಿದ್ದಾರೆ. ನಾವು ಇವತ್ತಿನ ದಿವಸ ಅದನ್ನು ಪ್ರಯೋಗಕ್ಕೆ ತಂದು ಡೈರೆಕ್ಟಾಗಿ ಪ್ರತಿಯೊಬ್ಬ ವೋಟರೂ ತನ್ನ ಮತವನ್ನು ಚಲಾಯಿಸಿ, ವಿಲೇಜ್ ಪಂಚಾಯತಿ ಪ್ರೆಸಿಡೆಂಟರನ್ನು ಚುನಾಯಿಸುವಂತೆ ಮಾಡಬೇಕೆಂಬ ಅಭಿಪ್ರಾಯ ಸಾಮಾನ್ಯವಾದ ಚರ್ಚೆಯಲ್ಲಿ ಬಂದಿಲ್ಲ. ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಖೋತ್‌ರವರು ಒಂದು ವಿಷಯ ಹೇಳಿದರು. ಯಾವನಾದರೂ ವಿಲೇಜ್ ಪಂಚಾಯತಿ ಸದಸ್ಯನಾಗ ಬೇಕಾದರೆ, ಅವನು ನಿಗದಿಯಾದ ಕೆಲಸ ಕಾರ್ಯಗಳನ್ನು ಮಾಡಿರಬೇಕು, ಸ್ವಲ್ಪ ಮಟ್ಟಿಗೆ ಕೋ ಆಪರೇಟೀವ್ ವಗೈರೆ, ಕ್ಷೇತ್ರದಲ್ಲಿ ಅತ ಕೆಲಸ ಮಾಡಿರಬೇಕು, ಅಂಥವರಿಗೇ ಸದಸ್ಯರಾಗಿರಲು ಅವಕಾಶವಿರಬೇಕೆಂದು ಹೇಳಿದರು. ಈಗಿನ ಪರಿಸ್ಥಿತಿಯಲ್ಲಿ ಇದನ್ನು ಒಪ್ಪುವುದಕ್ಕಾಗುವುದಿಲ್ಲ ಏಕೆಂದರೆ ಸಾಮಾನ್ಯವಾಗಿ ಹಳ್ಳಿಗಳಲ್ಲಿ ಓದಿದವರು, ಎಸ್. ಎಸ್. ಎಲ್. ಸಿ. ಮಾಡಿದವರು ಹೊರಗಡೆ ಬಂದು ಕೆಲಸಕ್ಕೆ ಸೇರಿಕೊಂಡುಬಿಟ್ಟಿರುತ್ತಾರೆ. ಇನ್ನು ಅವರು ಹೇಳಿದ ಕ್ಷೇತ್ರದಲ್ಲಿ ಕೆಲಸ ಮಾಡಿರುವ ವಿದ್ಯಾವಂತರು ಒಂದು ಹಳ್ಳಿಯಲ್ಲಿ ಬಹಳ ಕಡಮೆ ಜನರಿರುತ್ತಾರೆ. ಅವರು ಹೇಳಿದ ಅರ್ಹತೆಯನ್ನು ಹಾಕಿದರೆ, ಈ ಸ್ಥಾನಗಳನ್ನು ನಾಲ್ಕೈದು ಜನಗಳಿಗೇ ಮೀಸಲಾಗಿ ಇಟ್ಟಹಾಗಾಗುತ್ತದೆ. ಈ ಸಭೆಗೆ ಸದಸ್ಯರಾಗಿರಬೇಕಾದರೆ ಯಾವ ಮಾಹಿತಿ ಏನೂ ಬೇಕಾಗಿಲ್ಲ. ಅದೇ ರೀತಿ ಗ್ರಾಮ ಪಂಚಾಯತಿ, ತಾಲ್ಲೂಕು ಬೋರ್ಡುಗಳ ಸದಸ್ಯರಾಗಬೇಕಾದವರಿಗೆ ಯಾವ ಮಾಹಿತಿಯೂ ಬೇಕಾಗಿಲ್ಲವೆಂದು ನಾನು ತಮಗೆ ತಿಳಿಸುತ್ತೇನೆ.

Removal of members for misconduct ಕ್ಲಾಸ್ ವಿಚಾರದಲ್ಲಿ ಕೆಲವು ಸದಸ್ಯರು, ಈ ಮಾರ್ಗ ತಪ್ಪೆಂದು ಹೇಳಿದರು. ಅದನ್ನು ಒಪ್ಪುವುದಕ್ಕಾಗುವುದಿಲ್ಲ. ಎಲ್ಲಾ ಕಾನೂನುಗಳಲ್ಲಿಯೂ ಈ ರೀತಿಯೇ ಇದೆ. ಸಿಟಿ ಕಾರ್ಪೊರೇಷನ್ ಆಕ್ಟ್, ಟೌನ್ ಮುನಿಸಿಪಲ್ ಆಕ್ಟ್ ಯಾವ ಆಕ್ಟನ್ನು ತೆಗೆದುಕೊಂಡರೂ, ಒಬ್ಬ ಸದಸ್ಯ ಆ ಸಭೆಯ ಗೌರವಕ್ಕೆ ವಿರೋಧವಾಗಿ ವರ್ತಿಸಿದರೆ, ಮಿಸ್ ಕಾಂಡಕ್ಟ್ ಎಂದು ಪರಿಗಣಿಸುವುದಕ್ಕೆ ಮೂರು ವಿಧವಿದೆ. ಆ ಮೆಂಬರನ್ನು ತೆಗೆದುಹಾಕುವಾಗ after a particular enquiry ಎಂದಿದೆ. ಅದನ್ನೇ ಇಲ್ಲಿಯೂ ಇಟ್ಟುಕೊಂಡಿದ್ದೇವೆ. ಮಿಸ್ ಕಾಂಡಕ್ಟ್ ಎಂದರೆ ಏನು ಎಂದು ಇಲ್ಲಿ ಕೇಳಿದರೆ, ಅದರ ಲಕ್ಷಣವನ್ನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಅದಕ್ಕೆ ಹೈಕೋರ್ಟಿನ, ಸುಪ್ರೀಮ್ ಕೋರ್ಟಿನ ಡಿಸೈಡೆಡ್ ಕೇಸುಗಳಿವೆ. ಅವುಗಳ ಪ್ರಕಾರ ಮಾಡುತ್ತೇವೆ ಎಂದು ತಮ್ಮಲ್ಲಿ ಹೇಳುತ್ತೇನೆ.

ಶ್ರೀ ಎಂ. ರಾಮಪ್ಪ (ಹರಿಹರ).—ಒಬ್ಬ ಮೆಂಬರನ್ನು ಮಿಸ್ ಕಾಂಡಕ್ಟಿಗೆ ರಿಮೂವ್ ಮಾಡಬೇಕಾದರೆ, two thirds majority ಯಿಂದ ರೆಸಲ್ಯೂಷ್ಷ ಮಾಡಬೇಕೆಂದಿದೆ. ಕ್ಲಾಸ್ 34 ರಲ್ಲಿ ಚೇರ್‌ಮ್ಯಾ ಮತ್ತು ವೈಸ್-ಚೇರ್‌ಮನ್ನರನ್ನು ಡೆಪ್ಯುಟಿ ಕಮಿಷನರು ಎನ್‌ಕ್ವಯರಿ ಮಾಡಿ ತೆಗೆಯಬಹುದು.

Sri T. SUBRAMANYA.—In the case of an enquiry for misconduct, etc., a resolution of the Local Body is essential. Such a provision is made in all enactments. Without a resolution of the Local Body, on a mere petition filed by individuals, the Deputy Commissioner cannot be authorised to hold enquiries. Protection for the Members is also to be given. Hence I am sorry we will not be able to accept that proposition.

ಆಮೇಲೆ ಇನ್ನೊಂದು ವಿಷಯವನ್ನು ಒಬ್ಬ ಸದಸ್ಯರು ಈ ಸಭೆಯ ಗಮನಕ್ಕೆ ತಂದರು. ವಿಲೇಜ್ ಪಂಚಾಯತಿಯನ್ನು ಸೂಪರ್‌ಸೀಡ್ ಮಾಡಬೇಕಾದರೆ ಡೆಪ್ಯುಟಿ ಕಮಿಷನರು ಅಥವ ಕಮಿಷನರು ಮಾಡಬೇಕಾಗಿದೆ. ನಿನ್ನೆ ಒಬ್ಬ ಸದಸ್ಯರು ಮಾತನಾಡುವಾಗ ಷೋಕಾಸ್ ನೋಟೀಸ್ ಕೊಟ್ಟು ಸೂಪರ್‌ಸೀಡ್ ಮಾಡಬೇಕೆಂದು ಹೇಳಿದರು. ಅದರ ತತ್ವ ನನ್ನ ಮನಸ್ಸಿಗೆ ಬಂದಿದೆ. ಅಮೆಂಡ್‌ಮೆಂಟ್ ಬಂದಾಗ ನಾನು ಯೋಚನೆ ಮಾಡಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ನಾಳೆದ್ದಿಗೆ ಈ ಬಿಲ್ಲನ್ನು ಮುಗಿಸಬೇಕು. ಆದ್ದರಿಂದ ಮುಖ್ಯವಾದ ಅಮೆಂಡ್‌ಮೆಂಟುಗಳು, ಎಂದರೆ, ಈ ಬಿಲ್ಲಿಗೆ ಸ್ವಲ್ಪ ಕಳೆ ಕೊಡತಕ್ಕಂಥ ಅಮೆಂಡ್‌ಮೆಂಟುಗಳನ್ನು ತೆಗೆದುಕೊಳ್ಳೋಣ. ಮರ್ಜಲ್ ಅಮೆಂಡ್‌ಮೆಂಟುಗಳಿಗೆ ಅಷ್ಟೊಂದು ಗಮನ ಕೊಡಬೇಕಾಗಿಲ್ಲ.

ನಮ್ಮ ಬೊಂಬಾಯಿ ಸ್ನೇಹಿತರು ಆನ್ಯುಯಲ್ ಗ್ರಾಂಟು ಕೊಡುವಾಗ 30 ಪರ್ಸೆಂಟ್ ಕೊಡುವ ತತ್ವವನ್ನು ಅಂಗೀಕಾರ ಮಾಡಿಕೊಂಡು ಎಲ್ಲಾ ಪ್ರದೇಶಗಳಿಗೂ ಅನ್ವಯ ಮಾಡತಕ್ಕಂಥ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಿದರು. ಒಂದು ಕಾನೂನು ಮಾಡುವಾಗ, ಒಂದು ಕಡೆಯವರಿಗೆ ಸ್ವಲ್ಪ ಅನುಕೂಲವಾಗುತ್ತದೆ; ಮತ್ತೊಂದು ಕಡೆಯವರಿಗೆ ಅನಾನುಕೂಲವಾಗುತ್ತದೆ. ಕೋರ್ಟು ಫೀ ವಿಧಿಸುವಾಗಲೂ ಒಂದುಕಡೆಯವರಿಗೆ ಸ್ವಲ್ಪ ತೊಂದರೆಯಾಯಿತು; ಇನ್ನೊಂದುಕಡೆಯವರಿಗೆ ಅನುಕೂಲವಾಯಿತು. ಬೊಂಬಾಯಿಯವರಿಗೆ ಇದರಲ್ಲಿ ಅನಾನುಕೂಲವಾಗದ

(SRI T. SUBRAMANYA)

ರೀತಿಯಲ್ಲಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಇಷ್ಟು ಹೇಳಿ, ಈ ಸಭೆಯವರು ಈ ಬಿಲ್ಲನ್ನು ಅಂಗೀಕರಿಸಬೇಕೆಂದು ಹೇಳುತ್ತೇನೆ.

Sri S. D. KOTHAVALE (Chikodi).—As regards the term of the Panchayat and extension to Chairman, I have given an amendment. Is it the intention of the Government to request the House to accept the view that it can be extended for a period of five years or do they agree with the Select Committee's Report that it could be extended for one year only?

11 A.M.

Sri T. SUBRAMANYA.—The total period can never be more than 5 years. Ordinarily, the life is for 4 years, but the Deputy Commissioner has got power to extend it further by one year so that the entire period can never be more than 5 years. This is the natural interpretation anybody can give to this clause.

ಶ್ರೀ ಬಿ. ಇ. ರಾಮಯ್ಯ (ಸಿರುಗುಪ್ಪ).—ಈಗ ಪ್ರತ್ಯೇಕವಾಗಿ ಒಂದು ಪಂಚಾಯತಿ ಇಲಾಖೆ ಇರಬೇಕೆಂದು ಈ ಸಭೆಯಲ್ಲಿ ಚರ್ಚೆಯಾದ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಏನನ್ನೂ ಹೇಳಲಿಲ್ಲ. ಈ ಬಿಲ್ಲಿನ ಪ್ರಕಾರ ಡೆಪ್ಯುಟಿ ಕಮಿಷನರ್ ಮತ್ತು ಅಸಿಸ್ಟೆಂಟ್ ಕಮಿಷನರ್ ಎಂದು ಇದೆ. ಮದರಾಸಿನಲ್ಲಿ ಪ್ರತ್ಯೇಕವಾಗಿ ಪಂಚಾಯತಿ ಇಲಾಖೆ ಎಂದು ಇದೆ. Instead of the Deputy Commissioner, there is a Regional Commissioner for Local Boards and for the Assistant Commissioner there is the District Panchayat Officer. ಇದರಿಂದ ಪಂಚಾಯತಿಗಳಿಗೆ ಬಹಳ ಅನುಕೂಲತೆಯಾಗಿರುತ್ತದೆ. ಪ್ರತ್ಯೇಕವಾಗಿ ಪಂಚಾಯತಿ ಇಲಾಖೆಯನ್ನು ಸ್ಥಾಪನೆ ಮಾಡುವುದರಲ್ಲಿ ತಮ್ಮ ಅಭಿಪ್ರಾಯವೇನು?

ಶ್ರೀ ಟಿ. ಸುಬ್ರಹ್ಮಣ್ಯ.—ಅದನ್ನೂ ಮುಂದೆ ಹೇಳುತ್ತೇನೆ.

ಶ್ರೀ ಎಸ್. ವೈ. ಪಾಟೀಲ್ (ಸಿಂಧಗಿ).—ಪಂಚಾಯತಿ ಇರುವ ಕಡೆಗಳಲ್ಲಿ ಜನಸಂಖ್ಯೆ ಒಂದು ಸಾವಿರ ಇರಬೇಕು, 15 ನೂರು ಇರಬಾರದು ಎಂಬುದಾಗಿ ನಿನ್ನೆ ಚರ್ಚೆಯಾಯಿತು. ಡಿಸ್ಟ್ರಿಕ್ಟ್ ಬೋರ್ಡ್ ನೌಕರರಿಗೆ ಹೆಚ್ಚಿನ ಹುದ್ದೆಗಳನ್ನು ಕೊಡುವ ಬಗ್ಗೆ ಸರ್ಕಾರದವರು ಏನು ವ್ಯವಸ್ಥೆ ಮಾಡಿದ್ದಾರೆಂಬುದು ಇನ್ನೂ ಖುರಾಸೆಯಾಗಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯ.—ಅಲ್ಲಿ ಮೊದಲನೆಯದಾಗಿ ಎರಡು ತರಹ ನೌಕರರು ಇದ್ದಾರೆ. ಕೆಲವು ಪಂಚಾಯತಿಗಳಲ್ಲಿರತಕ್ಕ ನೌಕರರ ಹೊಕೆ ಪಾರ್ಟ್‌ಟೈಂ ವರ್ಕರ್ಸ್ ಇದ್ದಾರೆ. ಕೆಲವರು ಸ್ಕೂಲ್‌ಮಾಸ್ಟರುಗಳಾಗಿ ಕೆಲಸಮಾಡಿದ ನಂತರ ಅಲ್ಲಿಂದ ಬಂದು ಒಂದು ಗಂಟೆಕಾಲ ಕ್ಲಾರ್ಕ್ ಕೆಲಸ ಇಲ್ಲಿ ಮಾಡುತ್ತಾರೆ. ಈ ರೀತಿ ಉದ್ಯೋಗ ಮಾಡಿ ಇಲ್ಲಿ ಕ್ಲಾರ್ಕ್‌ಗಳಾಗಿದ್ದು ಕೊಂಡೇ ಸೆಕ್ರೆಟರಿಗಳಾಗಿದ್ದಾರೆ. ಬೇರೆ ಉದ್ಯೋಗ ವನ್ನೂ ಸಹ ಮಾಡುತ್ತಿದ್ದಾರೆ. ಅಂತಹವರಿಗೆ ಏನೂ ಪ್ರೊಟೆಕ್ಷನ್ ಕೊಡುವುದಕ್ಕಾಗುವುದಿಲ್ಲ. ಯಾರೇ ಆಗಲಿ ಹೋಲ್‌ಟೈಂ ಸರ್ಕಾರಿ ನೌಕರರಾಗಿದ್ದರೆ ಅವರಿಗೆ ಲೋಕಲ್‌ಬೋರ್ಡುಗಳಲ್ಲಾಗಲಿ, ಅಥವಾ ತಾಲ್ಲೂಕ್ ಬೋರ್ಡುಗಳಲ್ಲಾಗಲಿ ಸಾಧ್ಯವಾದಷ್ಟು ನೌಕರಿಗಳನ್ನು ಕೊಡುತ್ತೇವೆ. ಒಂದುವೇಳೆ ಅಲ್ಲಿ ಉದ್ಯೋಗ ಸಿಕ್ಕದಿದ್ದರೆ ಸರ್ಕಾರೀ ಇಲಾಖೆಗಳಲ್ಲಿ ಅಂಥವರನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೇವೆಂದು ಹೇಳುತ್ತಿದ್ದೇನೆ.

ಶ್ರೀ ಎಸ್. ವೈ. ಪಾಟೀಲ್.—ಈಗ ಉದಾಹರಣೆಗೆ ಹೇಳಬೇಕಾದರೆ ಇಂಜಿನಿಯರುಗಳನ್ನು ತೆಗೆದುಕೊಳ್ಳಿ. ಅವರನ್ನು ಪಿ.ಡಬ್ಲ್ಯು.ಡಿ. ಇಲಾಖೆಯವರನ್ನು, ತಾನೇ ಹಚ್ಚುತ್ತೀರಿ?

ಶ್ರೀ ಟಿ. ಸುಬ್ರಹ್ಮಣ್ಯ.—ಆ ವಿಷಯವನ್ನು ಈ ಸಭೆಯಲ್ಲಿ ಹಿಂದೆ ಒಂದುಸಾರಿ ವಿವರಿಸಿದ್ದೇನೆ. 700 ರೂಪಾಯಿ, ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳುವ ಇಂಜಿನಿಯರುಗಳನ್ನು ತಾಲ್ಲೂಕ್‌ಬೋರ್ಡ್‌ಗಳಿಗೆ ಸೇರಿಸುವುದಕ್ಕಾಗುವುದಿಲ್ಲ. ಇಂತಹ ದೊಡ್ಡ ದೊಡ್ಡ ಉದ್ಯೋಗಗಳಲ್ಲಿರುವವರನ್ನು ಸರ್ಕಾರಿ ನೌಕರಿಯಲ್ಲಿ ಸೇರಿಸಿ ಅವರ ಸ್ಥಾನಕ್ಕೆ ಚ್ಯುತಿ ಬಾರದೇ ಇರುವ ಹಾಗೆ ಮತ್ತು ಯಾವರೀತಿ ಅನ್ಯಾಯವೂ ಆಗದಿರುವ ಹಾಗೆ ನೋಡಿಕೊಳ್ಳುತ್ತಿದ್ದೇವೆ.

ಶ್ರೀ ರಾಮಯ್ಯನವರ ಸಂಶಯಕ್ಕೆ ಜವಾಬು ಕೊಡಬೇಕು. ನೌಕರರಲ್ಲಿ ಎಗ್ಜಿಕ್ಯುಟಿವ್ ಆಫೀಸರ್, ಕ್ಲಾರ್ಕ್, ಇಂಜಿನಿಯರ್, ಹೆಲ್ತ್ ಆಫೀಸರ್—ಹೀಗೆ ಬೇರೆಬೇರೆ ಕೇಡರ್‌ಗಳು ಇವೆ. ಅವರನ್ನು ಬೇರೆಬೇರೆ ಸ್ಥಳಕ್ಕೂ ವರ್ಗಮಾಡಬೇಕು, ಅವರು ಒಂದು ಕಡೆಯೇ ಇರಕೂಡದು ಎಂಬುದು ಸರ್ಕಾರದ ಉದ್ದೇಶ. ಲೋಕಲ್ ಸೆಲ್ಫ್ ಗೌರ್ನಮೆಂಟ್ ಕಮಿಷನರ ಕೈಕೆಳಗೆ ಡಿಸ್ಟ್ರಿಕ್ಟ್ ಆಫೀಸರ್ಸ್ ಇರಬೇಕು. ಈಗ ಡಿವಿಜನಲ್ ಕಮಿಷನರುಗಳಿದ್ದಾರೆ. ಅವರನ್ನು ತೆಗೆದುಹಾಕಿ ಅವರ ಬದಲಾಗಿ ಒಟ್ಟು ಆ ಪ್ರಾಂತಕ್ಕೆ ಅನ್ವಯಿಸತಕ್ಕ ನಾಲ್ಕು ಕಮಿಷನರುಗಳನ್ನು ಮಾಡಬಹುದು. ಅವರು ರೆವಿನ್ಯೂ ಕಮಿಷನರ್, ಎಲ್. ಎಸ್. ಜಿ. ಕಮಿಷನರ್, ಎಕ್ಸೈಜು ಕಮಿಷನರ್, ಮುಜರಾಯಿ ಕಮಿಷನರ್ ಆಗಿರಬೇಕು. ಈಗ ಸುಮ್ಮನೆ ನಾಲ್ಕು ಡಿವಿಜ್‌ಗಳಿಗೆ ನಾಲ್ಕು ಡಿವಿಜನಲ್ ಕಮಿಷನರ್‌ಗಳನ್ನು ಪೋಸ್ಟ್ ಮಾಡಿದ್ದೇವೆ. ಈ ಹುದ್ದೆಗಳನ್ನು ವಜಾಮಾಡಿ ಎಂದು ಕೆಲವರು ಹೇಳಿದ್ದಾರೆ. ಅದು ಸರ್ಕಾರದವರ ಪರಿಶೀಲನೆಯಲ್ಲಿದೆ. ಇದು ಸಕಾಲವಲ್ಲ. ಇನ್ನು ಸ್ವಲ್ಪಕಾಲ ಈ ರೀತಿಯೇ ನಡೆಯಬೇಕು. ಪ್ರತಿಯೊಂದು ಕಡೆಯೂ ಡಿವಿಜನಲ್ ಕಮಿಷನರ್ ಹುದ್ದೆಯನ್ನು ತೆಗೆದುಹಾಕಿ, ಅವರ ಬದಲು ಮೇಲೆ ಹೇಳಿದ ಪ್ರಕಾರ ಮೂರು ನಾಲ್ಕು ಕಮಿಷನರುಗಳನ್ನಿಟ್ಟರೆ ಕೆಲಸ ಸಮರ್ಪಕವಾಗಿ ನಡೆಯಲಾರದು. ಏಕೆಂದರೆ ಒಬ್ಬೊಬ್ಬರು ಬೆಂಗಳೂರಿನಲ್ಲೋ ಧಾರವಾಡದಲ್ಲೋ ಅಥವಾ ಹುಕ್ಕೇರಿಯಲ್ಲೋ ಇರುತ್ತಾರೆ. ಆದ್ದರಿಂದಲೇ ಸರ್ಕಾರದವರು ಡಿವಿಜನಲ್ ಕಮಿಷನರೊಬ್ಬರನ್ನು ನೇಮಿಸಿದ್ದು ಮತ್ತು ಜನಗಳ ಸಂಪರ್ಕ ಜಾಸ್ತಿ ಮಾಡುವ ಉದ್ದೇಶದಿಂದ ನಾಲ್ಕು ಡಿವಿಜ್‌ಗಳನ್ನು ಮಾಡಿ ನಾಲ್ಕು ಡಿವಿಜನಲ್ ಕಮಿಷನರುಗಳನ್ನು ಇಟ್ಟದ್ದು. ರೆವಿನ್ಯೂ ಡಿಪಾರ್ಟ್‌ಮೆಂಟ್ ನೋಡಿಕೊಳ್ಳುವುದಕ್ಕೆ ಎಲ್.ಎಸ್.ಜಿ. ಕಮಿಷನರು ಇದ್ದಾರೆ.

ಡಿವಿಜನಲ್ ಕಮಿಷನರಿಂದ ವಿಷಯಗಳು ಸಿಕ್ಕುವುದು ಕಷ್ಟ ಮತ್ತು ಎಲ್.ಎಸ್.ಜಿ. ಕಮಿಷನರ್ ಮತ್ತು ರೆವಿನ್ಯೂ ಕಮಿಷನರನ್ನು ಬೇರೆಮಾಡುವುದು ಸರಿಯಲ್ಲ. ಇದು ಸರ್ಕಾಲವಲ್ಲ, ಇನ್ನು ಆರು ತಿಂಗಳೋ ಅಥವಾ ಒಂದು ವರ್ಷವೋ ಆದಮೇಲೆ ಈರೀತಿ ಮಾಡಬೇಕೆಂದು ಸರ್ಕಾರದ ಅಭಿಪ್ರಾಯ. ಮಾನ್ಯ ಸದಸ್ಯರ ಅಭಿಪ್ರಾಯಗಳನ್ನು ಸಹ ತೆಗೆದುಕೊಂಡಿದ್ದೇವೆ. ಆ ಕಾಲಕ್ಕೆ ಎಲ್ಲ ವಿಷಯಗಳನ್ನು ತೆಗೆದುಕೊಳ್ಳೋಣ. ಹೀಗಿರುವಾಗ ಇನ್ನು ಸ್ವಲ್ಪಕಾಲ ಇದೇರೀತಿ ನಡೆದುಕೊಂಡುಹೋಗಲಿ ಎಂದು ಸರ್ಕಾರದ ಅಭಿಪ್ರಾಯ.

ಶ್ರೀ ಎಸ್. ವೈ. ಪಾಟೀಲ್.—ಡಿವಿಜನಲ್ ಕಮಿಷನರುಗಳಿಗೆ ಬದಲಾಗಿ ಬೇರೆಬೇರೆ ಕಮಿಷನರುಗಳನ್ನು ಮಾಡಬೇಕು ಎಂದು ಅನೇಕರು ಹೇಳುತ್ತಾರೆ. ಆದರೆ ಮಂತ್ರಿಗಳು ಅದಕ್ಕೆ ಸರಿಯಾದ ಮಾಹಿತಿ ಇರುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ಅಲ್ಲಿ ಯಾವ ಸಿಬ್ಬಂದಿ ಮೊದಲು ಇತ್ತೆಂಬುದಕ್ಕೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು. ಈಗಿನ ಕಾಲದಲ್ಲಿ ನೌಕರರನ್ನು ಹೆಚ್ಚುಮಾಡುವ ಪ್ರಶ್ನೆ ಅಷ್ಟು ಪ್ರಕೃತವಾಗಿಲ್ಲವೆಂದು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಸರ್ಕಾರೀ ನೌಕರರನ್ನು ಜಾಸ್ತಿಮಾಡಿಕೊಳ್ಳುವುದಕ್ಕೆ ಈಗ ಪ್ರಯತ್ನಮಾಡುವುದಿಲ್ಲವೆಂದು ಹೇಳುತ್ತೀರಿ. ಬೇರೆಬೇರೆ ಕಮಿಷನರುಗಳನ್ನು ಮಾಡುವ ಯೋಚನೆ ಸರ್ಕಾರದ ಪರಿಶೀಲನೆಯಲ್ಲಿದೆಯೆಂದು ಹೇಳುವಾಗ ಆ ಸಂದರ್ಭದಲ್ಲಿ ಸರ್ಕಾರದ ನೌಕರರು ಜಾಸ್ತಿಯಾಗುವುದಕ್ಕೆ ಏನು ಹೇಳುತ್ತೀರಿ?

ಶ್ರೀ ಟಿ. ಸುಬ್ರಹ್ಮಣ್ಯ.—ಈ ಕಾಲದಲ್ಲಿ ಬೇರೆಬೇರೆ ಕಮಿಷನರುಗಳನ್ನು ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿಲ್ಲ. ಕೆಲಸಗಳು ನಡೆಯುವುದಕ್ಕೆಷ್ಟು ಬೇಕೋ ಅಷ್ಟನ್ನು ಮಾತ್ರ ಮಾಡುತ್ತೇವೆ. ಸೆರೆಕ್ಟ್ ಕಮಿಟಿ ವರದಿಯನ್ನು ಓದಿದರೆ, ಡೆಪ್ಯೂಟಿ ಕಮಿಷನರಿಗೆ ಇದ್ದಂಥ ಅನೇಕ ಅಧಿಕಾರಗಳನ್ನು ತೆಗೆದುಹಾಕಿದ್ದೇವೆ. ಅವರಿಗೆ ಈಗಿರತಕ್ಕ ಅಧಿಕಾರದಲ್ಲಿ ಅವರು ಇನ್ನು ಹೆಚ್ಚು ಎ.ಇ.ಎಸ್. ಬ್ಲಾಕುಗಳಿಗೆ ಹೋಗುವುದಿಲ್ಲ. ಅರ್ಧ ಕೆಲಸವನ್ನೇ ಕಡಿಮೆಮಾಡಿದ್ದೇವೆ. ಡೆಪ್ಯೂಟಿ ಕಮಿಷನರ ಸ್ವಲ್ಪ ಕೆಲಸವನ್ನು ಡಿವಿಜನ್ನಿನಲ್ಲಿ ನಡೆಸುವುದಕ್ಕೆ ಡಿಸ್ಟ್ರಿಕ್ಟ್ ಲೆವಲ್ಲಿನಲ್ಲಿ ಒಬ್ಬ ಅಧಿಕಾರಿಯನ್ನು ನೇಮಿಸಿಕೊಂಡಿದ್ದೇವೆ. ಒಟ್ಟಿನಲ್ಲಿ ಡಿವಿಜನಲ್ ಕಮಿಷನರ ಮೂಲಕ ಎಲ್ಲಾ ಕೆಲಸಗಳೂ ನಡೆಯಬೇಕೆಂದು ನಮ್ಮ ಇರಾದೆ.

Sri M. RAMAPPA.—I want one clarification. Clause 97 (2) says that a member of the State Legislature shall be entitled to attend every meeting of the Taluk Board and take part in the proceedings but shall not be entitled to vote. I want to know whether it amounts to saying that he is a member of the Taluk Board or not If we say that he is a member and then if we say that he shall not vote, in such a case it conflicts with clause 103 (*g*) which says that a person shall be disqualified for being chosen as and for being a member of a Taluk Board if he is a municipal councillor or a councillor of the municipal corporation of Bangalore, etc. I want to know what will happen if one person is both a member of this House and also a member of a municipal council. Because if he is a municipal councillor, in such a case he cannot be a member of the Taluk Board. Sri Jambanna wanted me to clinch that clarification. I want you to make it very clear because there are a number of cases of that type.

Sri G. VENKATAI GOWDA (Palaiyam).—It has been provided that if he is a member of municipal council he is not entitled to contest for a seat of the Taluk Board. He can be an *ex-officio* member of the Taluk Board.

Sri M. RAMAPPA.—Under clause 103, he is disqualified even to be a member.

Sri T. SUBRAMANYA.—I will get it examined and then give a definite reply. But my reaction is, nobody can be a member of two local bodies. If he chooses to be a member of the municipal council, he cannot be a member of the Taluk Board; he cannot even contest. Whether by virtue of his having been a member of the Legislative Assembly, though he is a member of a municipal council, he can continue to be a member of the Taluk Board or not, is a matter which requires a little examination. I will examine it and let you know whether we can adopt the principle underlying it that no man shall be a member of two local bodies.

ಒಬ್ಬ ಮಾನ್ಯ ಸದಸ್ಯರು.—1,500 ಪ್ರಜಾಸಂಖ್ಯೆಗೊಂದು ಗ್ರಾಮಪಂಚಾಯಿತಿ ಇರಬೇಕೆಂದೂ, ಹಾಗೆ ಯಾವಯಾವ ಗ್ರಾಮಗಳ ಪ್ರಜಾಸಂಖ್ಯೆ 1,500ಕ್ಕೆ ಕಡಮೆ ಇರುತ್ತದೆಯೋ ಅಂಥ ಎರಡು-ಮೂರು ಗ್ರಾಮಗಳ ಒಂದು ಸರ್ಕಲ್‌ಮಾಡಿ 1,500 ಪ್ರಜಾ ಸಂಖ್ಯೆಗನುಗುಣವಾಗಿ ಒಂದು ಪಂಚಾಯಿತಿ ಇರಬೇಕೆಂದು ಹೇಳಿದೆ. ಇದು ಬಹಳ ಜಾಸ್ತಿಯಾಯಿತು. ಈ ಪ್ರಜಾಸಂಖ್ಯೆಯನ್ನು ಸಾವಿರಕ್ಕೆ ಇಳಿಸತಕ್ಕ ವಿಚಾರದಲ್ಲಿ ಮಂತ್ರಿಗಳೇನೂ ಉತ್ತರ ಹೇಳಲಿಲ್ಲ.

ಶ್ರೀ ಟಿ. ಸುಬ್ರಹ್ಮಣ್ಯ.—ಈಗ ಮನೂದೆಯಲ್ಲಿ ಆ ಪ್ರಜಾಸಂಖ್ಯೆಯನ್ನು ಒಂದು ಸಾವಿರಕ್ಕೆ ಇಳಿಸುವುದಕ್ಕೂ ಅವಕಾಶವಿದೆ. ಸರ್ಕಾರದವರು ಅವಶ್ಯಕತೆ ಕಂಡುಬರತಕ್ಕ ಕಡೆಗಳಲ್ಲಿ ಇದನ್ನು ಒಂದು ಸಾವಿರಕ್ಕೆ ಇಳಿಸುವುದಕ್ಕೂ ಅವಕಾಶ ಉಂಟು. ಆದರೆ ಅದನ್ನು ಇನ್ನೂ ಸ್ಪಷ್ಟವಾಗಿ ಹೇಳಬಹುದು ಅದಕ್ಕೇನೂ ಕಷ್ಟವಿಲ್ಲ. ಆದರೆ ಈ ಪ್ರಜಾಸಂಖ್ಯೆ 1,500 ಇರಬೇಕಂದು ಹೇಳುವಾಗ ಏನೇನು ತೊಂದರೆಗಳಿರುತ್ತವೆಯೋ ಆ ತೊಂದರೆಗಳೆಲ್ಲ ಅದನ್ನು ಸಾವಿರಕ್ಕೆ ಇಳಿಸಿದಾಗಲೂ ಇದ್ದೇಇರುತ್ತವೆ. ಆದುದರಿಂದ ನಾವು ಆ ತೊಂದರೆಗಳನ್ನು ಎದುರಿಸಿಕೊಂಡುಹೋಗಲೇಬೇಕು.

ಶ್ರೀ ಬಿ. ಇ. ರಾಮಯ್ಯ.—ಈಗ ಜಿಲ್ಲಾ ಡೆವಲಪ್‌ಮೆಂಟ್ ಕಮಿಟಿಗಳಿಗೆ ಡೆಪ್ಯುಟಿ ಕಮಿಷನರನ್ನು ಅಧ್ಯಕ್ಷರನ್ನಾಗಿ ಮಾಡಿದ್ದೀರಿ. ಈಗಾಗಲೇ ಅವರಿಗೆ ಬಹಳ ಕೆಲಸಗಳಿರುತ್ತವೆ. ಹೀಗಿರುವಾಗ ಅವರಿಗೇ ಮತ್ತೆ ಈ ಪಂಚಾಯಿತಿ ಮತ್ತು ಜಿಲ್ಲಾ ಡೆವಲಪ್‌ಮೆಂಟ್‌ಗಳ ಕೆಲಸ ವಹಿಸತಕ್ಕದ್ದು ಸರಿಯಾದ್ದಲ್ಲ. ಆದುದರಿಂದ ಈ ಲೋಕಲ್‌ಬೋರ್ಡ್‌ಗಳಿಗೇ ಪ್ರತ್ಯೇಕವಾದ ಜನರನ್ನು ಜಿಲ್ಲಾ ಲೆವಲ್‌ನಲ್ಲೂ, ರೀಜನಲ್ ಲೆವಲ್‌ನಲ್ಲೂ, ಮತ್ತು ಪಂಚಾಯಿತಿಗಳ ಬಗ್ಗೆಯೂ ನೇಮಿಸತಕ್ಕದ್ದು ಅತ್ಯಗತ್ಯ. ಈ ದಿವಸ ಮದ್ರಾಸಿನಲ್ಲಿ ಆರೀತಿ ಮಾಡಿದ್ದಾರೆ.

ಶ್ರೀ ಜಿ. ವೆಂಕಟೇಗೌಡ.—ಮದ್ರಾಸಿನಲ್ಲಿ ಮಾಡಿರತಕ್ಕ ರೀತಿಯಲ್ಲಿ ಅದರ ಆಡಳಿತ ಹೇಗೆ ನಡೆಯುತ್ತಿದೆ ಎನ್ನತಕ್ಕದ್ದನ್ನೆಲ್ಲಾ ಪರಿಶೀಲನೆ ಮಾಡಿನೋಡಿ ಆ ಪದ್ಧತಿಗಿಂತಲೂ ನಾವೀಗ ಮಾಡಿರತಕ್ಕದ್ದು ಇನ್ನೂ ಉತ್ತಮವಾದುದೆಂಬುದಾಗಿ ಕಂಡುಬಂದುದರಿಂದ ಇದನ್ನು ಅಡಕಮಾಡಲಾಗಿದೆ. ಅದುದರಿಂದ ಮಾನ್ಯ ಸದಸ್ಯರು ನೋಡಿನುವಂಥ ಬದಲಾವಣೆಗಳೇನಿವೆ ಅವು ಅನವಶ್ಯಕವೆಂದು ನಾನು ಹೇಳುತ್ತೇವೆ.

ಶ್ರೀ ಟಿ. ಸುಬ್ರಹ್ಮಣ್ಯ.—ನಾನು ಕೊಡಬೇಕಾಗಿದ್ದ ಉತ್ತರವನ್ನು ಶ್ರೀ ವೆಂಕಟೇಗೌಡರೇ ಕೊಟ್ಟಿದ್ದಾರೆ. ನಾನಿನ್ನು ಹೆಚ್ಚಿಗೆ ಹೇಳತಕ್ಕದ್ದೇನೂ ಇಲ್ಲ.

Mr. CHAIRMAN.—Now I will put the motion to the vote of the House.

The question is:

"That the Mysore Village Panchayats and Local Boards Bill, 1959 as reported by the Joint Select Committee, be taken into consideration."

The motion was adopted.

Mr. CHAIRMAN.—Now we will take clause by clause. Clause 2. In respect of this clause, the first amendment stands in the name of Sri J. B. Mallaradhya. Here I would just like to say one thing. Sri Mallaradhya was a member of the Select Committee, but there is no rule prohibiting him from moving an amendment. He has sent a lot of amendments, but the convention is that the members of Select Committees should not ordinarily send in amendments but since there is no prohibition, he may move his amendment.

Sri J. B. MALLARADHYA.—I am grateful to the Speaker for bringing to my notice a convention that is in this House that a member of the Select Committee should not ordinarily send an amendment unless he has appended a dissenting note. I am fully aware of that, but I mention this because the discussion on this Bill is going on in an atmosphere of goodwill, understanding and all that.

Sri T. SUBRAMANYA.—I have agreed to that.

Sri J. B. MALLARADHYA.—So I do not wish to say anything.

I move this amendment:

'That in clause 2, item (5), the words "the Divisional Commissioner or such other officer as may be appointed by the Government to exercise the powers of the' shall be omitted.'

Mr. CHAIRMAN.—Amendment moved:

'That in clause 2, item (5), the words "the Divisional Commissioner or such other officer as may be appointed by the Government to exercise the powers of the" shall be omitted.'

Sri J. B. MALLARADHYA.—Item (5) as amended would be as follows:

"'Commissioner' means the Commissioner for Local Self-Government under this Act".

Mr. CHAIRMAN.—Since we have got a very large number of amendments to be covered, I would request the mover to be just as brief as possible.

Sri J. B. MALLARADHYA.—The whole idea is that many sections of this House have categorically stated that these Divisional Commissioners' job is a kind of fifth wheel in the coach without being in the interests of efficient and quick despatch of work and so all these Divisional Commissioners need not be there. But I do not know why Government is persisting times out of number to see that this job is continued though it means Rs. 10 lakhs to the Government. But so far as this Bill is concerned, most of us have very strongly felt and expressed that this is like a fifth wheel in the coach. In fact, the Local Self-Government administration will have to vest in one individual, whether you abolish the place of Divisional Commissioner or not. If

you want a fresh impetus to the development of local administration in the State, you must see that one officer who is capable of having control over the entire ambit of administration should be there; there is no alternative at all. If you give effect to this Bill, I would suggest the appointment of a wholetime officer as Local Self-Government Commissioner and see that the several phases of this Act are implemented. I do not want any intermediate officer. I want that 'Commissioner' should mean 'Commissioner for Local Self-Government.'

Sri B. CHAMIAH (Pandavapura).—I support the amendment moved by Sri Mallaradhya.

Sri T. SUBRAMANYA.—I have to stand by the Government. Just at present we cannot abolish the place of Divisional Commissioner, but I do not concede the point that he is a fifth wheel in the coach. He has definite functions to perform and I take this opportunity to tell the House and through them the public that they are functioning very well and their role is very important. Now at present we cannot have Local Self-Government Commissioner immediately. Therefore in the clause we have stated: "'Commissioner" means the Divisional Commissioner or any other officer as may be appointed by the Government'. It will provide for all contingencies. Therefore, I oppose this amendment.

Sri J. B. MALLARADHYA.—Why should you have the Divisional Commissioner at all? Let 'Commissioner' mean 'any officer appointed by the Government.'

Sri T. SUBRAMANYA.—It requires another order appointing the Divisional Commissioner as the Local Self-Government Commissioner. Therefore, I oppose the amendment.

Mr. CHAIRMAN.—Now I shall put the amendment to vote. The question is:

'That in clause 2, item (5), the words "The Divisional Commissioner or such other officer as may be appointed by the Government to exercise the powers of the" shall be deleted.'

The motion was negatived.

Mr. CHAIRMAN.—There is an amendment tabled by Sri Kenchappa in respect of item (8).

Sri K. KENCHAPPA.—Sir, I beg to move:

'Item 8: For the words "District the Council" words "District Board" shall be substituted and defined as follows:—

"District Board means the District Board constituted under the Act for a Revenue District."'

Mr. CHAIRMAN.—Amendment moved:

'Item 8: For the words "District Council" the words "District Board" shall be substituted and defined as follows:—

